# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 Volume:01 • ಸಂಚಿಕೆ:291 Issue:291 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 18.04.2024 18.04.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2


## ಮತದಾನ ಮಾಡಿ ಪ್ರಜಾತಂತ್ರ ಗೆಲ್ಲಿಸಿ

# ಜೋಡಿ ರಥೋತ್ಸವದಲ್ಲಿ ಗೋವಿಂದ ಸ್ಮರಣೆ

## ಲಕ್ಷಾಂತರ ಭಕ್ತರಿಂದ ಝೇಂಕರಿಸಿದ ಜಯಘೋಷ | 3 ಮತ್ತು 5 ಲಕ್ಷ ರೂ.ಗೆ ಪಟಾಕ್ಷಿ ಹರಾಜು



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಪಟ್ಟಣದ ಆರಾಧ್ಯ ದೈವಗಳಾದ ಶ್ರೀಲಕ್ಷ್ಮೀ ನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿಗಳ ಜೋಡಿ ರಥೋತ್ಸವ ಬುಧವಾರ ಅದ್ದೂರಿಯಿಂದ ಲಕ್ಷಾಂತರ ಭಕ್ತಸಮೂಹದೊಂದಿಗೆ ನಡೆಯಿತು.

ಚೈತ್ರಶುದ್ಧ ಪಾಡ್ಯದಿಂದ ಆರಂಭಗೊಂಡು ದೇವತಾ ಕಾರ್ಯಕ್ರಮಗಳು ಚೈತ್ರ ಶುದ್ಧ ದ್ವಾದಶಿಯವರೆಗು ಧಾರ್ಮಿಕ ವಿಧಿ ವಿಧಾನಗಳು ಜರುಗಿದವು. ರಥೋತ್ಸವದಂದು ರಥಾಂಗಹೋಮ ನಡೆಯಿತು, ನಂತರ ಮಧ್ಯಾಹ್ನ ಬ್ರಾಹ್ಮಣ ಮತ್ತು ವೈಶ್ಯ ಸಮುದಾಯದವರಿಂದ ಪಲ್ಲಕ್ಕಿಯಲ್ಲಿ ಉಭಯಸ್ವಾಮಿಗಳ ಉತ್ಸವ ಮೂರ್ತಿಗಳನ್ನು ಮೆರವಣಿಗೆಯ ಮೂಲಕ ತಂದು ರಥದಲ್ಲಿ ಪ್ರತಿಷ್ಠಾಪಿಸಿ ನಂತರ ಮಡಿತೇರು ಎಳೆದರು. ರಥೋತ್ಸವದ ನಿಮಿತ್ತ ಉಭಯ ಸ್ವಾಮಿಗಳಿಗೆ ವಿಶೇಷ ಆಭರಣ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಯಿತು.

ಸುಮಾರು 7 ಶತಮಾನಗಳ ಐತಿಹ್ಯ ಸಾರುವ ಈ ಜೋಡು ರಥಗಗಳು ಈ ಬಾರಿ ಕೊನೆಯದೆಂಬುದಾಗಿ ಭಕ್ತರು ಎಳೆದಿದ್ದಾರೆ. ಮುಂದಿನ ವರ್ಷದಿಂದ ಹೊಸ ರಥಗಳು ಸಿದ್ಧಗೊಳ್ಳಲಿವೆ. ದೇವಸ್ಥಾನವನ್ನು ವಿಶೇಷವಾಗಿ ಹೂಗಳಿಂದ, ದೇವಸ್ಥಾನದ ಪ್ರಾಂಗಣ, ಮುಖ್ಯಬೀದಿ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಧಾರ್ಮಿಕ ವಿಧಿವಿಧಾನಗಳನ್ನು ಕಿನ್ನಾಳದ ಗಂಗೂರ ಮನೆತನದವರು ಸಾಂಗೋಪಾಂಗವಾಗಿ ನಡೆಸಿದರು. ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ದೇವಸ್ಥಾನದ ಬಳಿ ಸರದಿಯಲ್ಲಿ ನಿಂತು ದೇವರ ದರ್ಶನ ಪಡೆಯಲು ದೇವಸ್ಥಾನ ಅಭಿವೃದ್ಧಿ ಸಮಿತಿಯವರು ವಿಶೇಷ ವ್ಯವಸ್ಥೆಮಾಡಿದ್ದರು.ಕೆಲ ಭಕ್ತರು ದೇವಸ್ಥಾನದ ಆವರಣದಲ್ಲಿ ಧೀರ್ಘ ದಂಡ ನಮಸ್ಕಾರ ಹಾಕಿ ಹರಕೆ ತೀರಿಸಿದರು.

ವಿವಿಧ ಗೊಂಬೆ, ತಳಿರು ತೋರಣಗಳಿಂದ ಅಲಂಕೃತಗೊಂಡು ರಥಕ್ಕೆ ಸಂಜೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಸ್ವಾಮಿಯ ಪಟದ ಹರಾಜು ನಡೆಯಿತು ಶ್ರೀ ಲಕ್ಷ್ಮೀ ನಾರಾಯಣ ಸ್ವಾಮಿಯ ಪಟವನ್ನು ಅಯ್ಯನಹಳ್ಳಿ ಗಂಗಣ್ಣ 3 ಲಕ್ಷ ರೂ ಮತ್ತು ಶ್ರೀ ಆಂಜನೇಯ ಸ್ವಾಮಿಯ ಪಟವನ್ನು 5 ಲಕ್ಷ ರೂಗಳಿಗೆ ಅಯ್ಯನಹಳ್ಳಿ ನಾಗರಾಜ ರವರು ಪಡೆದುಕೊಂಡರು. ಲಕ್ಷಾಂತರ ಭಕ್ತರು ಉಭಯ ಸ್ವಾಮಿಗಳ ರಥಗಳನ್ನು ಎಳೆದು ಹೂ, ಹಣ್ಣುಗಳನ್ನು ರಥಕ್ಕೆ ಎಸೆದು ಭಕ್ತಿ ಸಮರ್ಪಿಸಿದರು.



ರಥಗಳು ಸಾಗುವುದನ್ನು ನೋಡಲು ಎರಡು ಬದಿಗಳಲ್ಲಿ ಭಕ್ತರು ಮನೆ, ಅಂಗಡಿ ಮಹಡಿಗಳ ಮೇಲೆ, ರಥ ಬೀದಿಯಲ್ಲಿ ಸಾಲಾಗಿ ನಿಂತು ವೀಕ್ಷಿಸಿದರು. ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿಗಳ ಹಾಗು ಗೋವಿಂದ... ಗೋವಿಂದ, ಜೈಶ್ರೀರಾಮ್ ಎಂಬ ಜಯಘೋಷಗಳೊಂದಿಗೆ ರಥಗಳನ್ನು ಎಳೆದು ನಂತರ ಸ್ವಸ್ಥಾನಕ್ಕೆ ತಂದು ನಿಲ್ಲಿಸಿದರು. ರಥೋತ್ಸದಲ್ಲಿ ಸ್ಥಳೀಯರು ಸೇರಿದಂತೆ ಮರಿಯಮ್ಮನಹಳ್ಳಿಯ ಸುತ್ತ ಮುತ್ತಲಿನ ಗ್ರಾಮಗಳಿಂದ ಮತ್ತು ವಿವಿಧೆಡೆಗಳಿಂದ ಬಂದ ನಾಣಿಕೇರಿಯ ಭಕ್ತರು ಆಗಮಿಸಿದ್ದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಅಪರ ಜಿಲ್ಲಾಧಿಕಾರಿ ಜೆ.ಅನುರಾಧ, ತಹಶೀಲ್ದಾರ್ ಎಂ.ಎಂ.ಶೃತಿ, ದೇವಸ್ಥಾನ ಅಧಿಕಾರಿಗಳಾದ ವೆಂಕಟರಮಣ, ಎಚ್.ನಾಗರಾಜ ಸೇರಿದಂತೆ ಇತರರು ದೇವರ ದರ್ಶನ ಪಡೆದರು. ವಿಜಯನಗರ ಎಸ್ಪಿ, ಎಎಸ್ಪಿ, ಡಿವೈಎಸ್ಪಿ, 6 ಸಿ.ಪಿ.ಐ, 9 ಪಿ.ಎಸ್.ಐ., 2 ಡಿ.ಆರ್, 120 ಪೋಲಿಸರು ಸೂಕ್ತ ಬಂದೋಬಸ್ತ್ ಕೈಗೊಂಡಿದ್ದರು.


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ,
ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com












## ಏ.21 ರಂದು ಮ್ಯಾರಾಥಾನ್ ಓಟ

### ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಆಯೋಜನೆ

■ **ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮತದಾನದ ಮಹತ್ವ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಏ.21 ರಂದು ಬೆಳಿಗ್ಗೆ 07 ಗಂಟೆಗೆ ನಗರದ ರೈಲ್ವೇ ನಿಲ್ದಾಣ ಮುಂಭಾಗದ ಆವರಣದಿಂದ ಮ್ಯಾರಾಥಾನ್ ಓಟ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಶರಣಪ್ಪ ಸಂಕನೂರ ತಿಳಿಸಿದ್ದಾರೆ.

**ಮ್ಯಾರಾಥಾನ್ ಓಟ ಮಾರ್ಗ**

ಮ್ಯಾರಾಥಾನ್ ಓಟವು ರೈಲ್ವೇ ನಿಲ್ದಾಣ ಮುಂಭಾಗದ ಆವರಣದಿಂದ ಆರಂಭವಾಗಿ ಹೆಚ್.ಆರ್.ಗವಿಯಪ್ಪ ವೃತ್ತದಿಂದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಮಾರ್ಗವಾಗಿ ರೈಲ್ವೇ ಮೊದಲನೇ ಗೇಟ್ (ಮೊಹಮ್ಮದೀಯ ಸ್ಕೂಲ್) – ಕೌಲ್‌ಬಜಾರ್ ಪೊಲೀಸ್ ಠಾಣೆ– ಬೆಳಗಲ್ ಕ್ರಾಸ್– ರೇಡಿಯೋ ಪಾರ್ಕ್ ಮೂಲಕ ಸರ್ಕಾರಿ ಐಟಿಐ ಕಾಲೇಜ್ ಮೈದಾನದಲ್ಲಿ ತಲುಪಿ ಅಂತ್ಯಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

## ರಾಮಧ್ಯಾನದಲ್ಲಿ ಶ್ರೀರಾಮಭಕ್ತರು



ಹೊಸಪೇಟೆ ಫ್ರೀಡಂ ಪಾರ್ಕ್‌ನಲ್ಲಿ ಶ್ರೀರಾಮ ನವಮಿ ನಿಮಿತ್ತ ಅನೇಕರು ಯೋಗ, ಧ್ಯಾನ, ಪ್ರಾಣಾಯಾಮ ರಾಮಧ್ಯಾನದ ಮೂಲಕ ಶ್ರೀರಾಮ ನವಮಿ ಆಚರಿಸಿದರು. ಮಕ್ಕಳು ಶ್ರೀರಾಮ,ಸೀತೆ, ಲಕ್ಷ್ಮಣ, ಹನುಮಂತ ವೇಷಧಾರಿಯಾಗಿ ಗಮನ ಸೆಳೆದರು.



## ಬೆಳಕಿನ ಹಾದಿ

# ನೈಜ ಶ್ರೀಮಂತಿಕೆ



ಆಧುನಿಕತೆಯೆಡೆಗಿನ ಮಾನವ ನಾಗರಿಕತೆಯ ಪ್ರಗತಿಯು ಏನೆಲ್ಲಾ ಸೌಲಭ್ಯಗಳಿಂದ ತುಂಬಿಹೋಗಿದ್ದರೂ ಅಷ್ಟೇ ಪ್ರಮಾಣದಲ್ಲಿ ಮಾನವನ ಜೀವನದ ಮೇಲೆ ತನ್ನ ನಕಾರಾತ್ಮಕ ಪರಿಣಾಮವನ್ನು ಬೀರಿದೆ. ಸಾಮಾನ್ಯವಾಗಿ ಅತಿಯಾದ ಸೌಲಭ್ಯಗಳನ್ನೇ ನಾವು ಶ್ರೀಮಂತಿಕೆಯ ಮಾನದಂಡಗಳೆಂದು ಪರಿಗಣಿಸುತ್ತೇವೆ. ಒಂದರ್ಥದಲ್ಲಿ ತೋರಿಕೆಗೆ ಇದು ಸರಿ ಅನಿಸಿದರೂ ಅದು ನಮ್ಮ ಸಾಮಾನ್ಯ ಗ್ರಹಿಕೆಯ ಫಲ ಆದರೆ ಪೂರ್ಣ ಸತ್ಯವಲ್ಲ. ಸೌಲಭ್ಯಗಳು ಹಾಗೂ ಶ್ರೀಮಂತ ಮನಸ್ಥಿತಿಯ ಮಧ್ಯೆ ಒಂದು ದೊಡ್ಡ ವ್ಯತ್ಯಾಸವಿದೆ.

ಉದಾಹರಣೆಗೆ : ಒಬ್ಬ ವ್ಯಕ್ತಿಯು ತಾನು ಕಡಿಮೆ ಸೌಲಭ್ಯಗಳನ್ನು ಹೊಂದಿದ್ದರೂ ತನ್ನ ಮನೋ–ಭಾವನಾವಲಯದಲ್ಲಿ ಶ್ರೀಮಂತನಾಗಿರಬಹುದು. ಈ ಸಮೃದ್ಧ ಭಾವವೇ ಆತನ ಅನುಭವಾತ್ಮಕ ಸತ್ಯವಾಗಿರುತ್ತದೆ. ಏಕೆಂದರೆ ಆತನು ನಿತ್ಯ ನಿರಂತರ ಅದೇ ಸ್ಥಿತಿಯಲ್ಲಿ ಜೀವಿಸುವಂಥವನು. ಆದರೆ ಇದಕ್ಕೆ ವೈರುಧ್ಯವಾಗಿ ಮತ್ತೊಬ್ಬ ವ್ಯಕ್ತಿ ಅತ್ಯಂತ ಐಷಾರಾಮಿ ಜೀವನ ಶೈಲಿ ಹೊಂದಿದ್ದರೂ ಆತನು ಮಾನಸಿಕವಾಗಿ,ಭಾವನಾತ್ಮಕವಾಗಿ ಮತ್ತು ಬೌದ್ಧಿಕವಾಗಿ ಅತ್ಯಂತ ಬಡವನಾಗಿರಬಹುದು. ಈ ರೀತಿಯ ಬಡತನವು ಸಹ ಅಷ್ಟೇ ಸತ್ಯವಾದದ್ದು ಆದರೆ ಇದು ಇತರರಿಂದ ಗುರುತಿಸಲ್ಪಡುವಂಥದ್ದಲ್ಲ. ವಿಪರ್ಯಾಸವೆಂದರೆ ಈ ಬಗೆಯ ಬಡತನದ ಪ್ರಜ್ಞೆಯು ಆತನಿಗೆ ಇರುವುದಿಲ್ಲ. ಮೇಲಾಗಿ ತಾನು ಇತರರಿಗಿಂತ ಶ್ರೇಷ್ಠ ಎಂಬ ಭ್ರಮೆಯಲ್ಲಿ ಇರುತ್ತಾನೆ. ನಮಗೆ ಅರ್ಥವಾಗಲೇ ಬೇಕಾದ ಒಂದು ಕಠೋರ ಸತ್ಯವೇನೆಂದರೆ ಮನೋ–ಭಾವನಾತ್ಮಕ ವಲಯದ ಬಡತನವು ಅಥವಾ ಅಪರಿಪಕ್ವತೆ ಯಾವುದೇ ಕಾರಣಕ್ಕೂ ಶ್ರೀಮಂತಿಕೆಯ ಅನುಭವವನ್ನು ನೀಡುವುದಿಲ್ಲ.ಅದ್ಹೇಗೆ ಎಂದರೆ, ಆಂತರಿಕ ವಿಕಾಸ ಹೊಂದುತ್ತಿರುವ ಒಬ್ಬ ವ್ಯಕ್ತಿಗೆ ಒಂದು ಚಿಕ್ಕ ಹೂವಿನ ಸೌಂದರ್ಯವು ಪ್ರೇಮದ ಆಘಾದ ಅನುಭೂತಿಯನ್ನು ನೀಡಬಹುದು. ಆದರೆ ತನ್ನ ಅಂತರ್ ಜಗತ್ತಿನಲ್ಲಿ ಬಡವನಾದ ವ್ಯಕ್ತಿಯನ್ನು ಒಂದು ಹೂವಿನ ತೋಟದಲ್ಲಿ ನಿಲ್ಲಿಸಿದರು ಆತ ಏನನ್ನು ಭಾವಿಸದೆ ಇರಬಹುದು. ಇಲ್ಲಿ ಆತನು ಹೂವಿನಷ್ಟು ಸಹ ಶ್ರೇಷ್ಠನಾಗಿರಲಾರ.ಬದಲಾಗಿಅದಕ್ಕಿಂತಲೂಕನಿಷ್ಠಮಟ್ಟದವನಾಗಿರುತ್ತಾನೆ. ನಮಗೆಲ್ಲ ತಿಳಿದಿರುವಂತೆ ಸಾಮಾಜಿಕ ಜಗತ್ತಿನಲ್ಲಿ ಭೌತಿಕ ಶ್ರೀಮಂತಿಕೆಗೆ ಹೆಚ್ಚು ಗೌರವ ವಿರುತ್ತದೆ. ಏಕೆಂದರೆ ಅದು ಕಣ್ಣಿಗೆ ಕಾಣುವಂಥದ್ದು ಮತ್ತು ಅದಕ್ಕೆ ತನ್ನದೇ ಆದ ಪ್ರಭಾವ ಇರುತ್ತದೆ ಜೊತೆಗೆ ಇವತ್ತಿನ ಐಷಾರಾಮಿ ಬದುಕು ನಾಳಿನ ಅವಶ್ಯಕತೆಯಾಗಿ ಪರಿಣಮಿಸಬಹುದು. ಆದರೆ ವ್ಯಕ್ತಿಯ ಆಂತರಿಕ ಶ್ರೀಮಂತಿಕೆಯು ಕಾಣುವಂಥದ್ದಲ್ಲ ಅದು ಅಮೂರ್ತ, ಅದಕ್ಕೆ ತನ್ನದೇ ಆದ ಶ್ರೇಷ್ಟಮೌಲ್ಯವಿರುತ್ತದೆ. ಅದು ನಮ್ಮ ನೈಜ ವಿಕಾಸ. ಈ ಕಾರಣಕ್ಕಾಗಿಯೆ ಒಬ್ಬ ವ್ಯಕ್ತಿಯನ್ನು ನಿಜವಾಗಿಯೂ ಶ್ರೀಮಂತನನ್ನಾಗಿ ಮಾಡುವ ಯಾವುದೇ ಬಗೆಯ ವಿದ್ಯೆ, ಕಲೆ, ಸಾಹಿತ್ಯ,ಸಂಸ್ಕೃತಿಗೆ ಪ್ರಧಾನತೆ ಇರುವುದು.

ಭೌತಿಕವಾಗಲಿ, ಮಾನಸಿಕ, ಭಾವನಾತ್ಮಕ ಮತ್ತು ಬೌದ್ಧಿಕ ಯಾವುದೇ ಬಗೆಯ ಶ್ರೀಮಂತಿಕೆಯಾಗಲಿ ಅದು ಶ್ರೇಷ್ಠವೇ ಆಗಿರುತ್ತದೆ. ಅದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಪರಿಪಕ್ವ ಶ್ರೀಮಂತಿಕೆಯ ಪ್ರಜ್ಞೆ ಮತ್ತು ಜೀವಂತಿಕೆ ನಮ್ಮಲ್ಲಿದ್ದಾಗ ಮಾತ್ರ ನಮ್ಮ ಅನುಭವ ಶ್ರೇಷ್ಠ ಮಟ್ಟದ್ದಾಗಿರುತ್ತದೆ. ಅದೇ ನಮ್ಮನ್ನು ಶ್ರೇಷ್ಠರನ್ನಾಗಿಸುತ್ತದೆ. ಆದರೆ ಯಾವುದೇ ಪ್ರಜ್ಞೆ, ಭಾವನೆ ಮತ್ತು ಅನುಭವವಿಲ್ಲದ ವ್ಯಕ್ತಿಯು ಒಂದು ವಸ್ತುವಿಗಿಂತ ಶ್ರೇಷ್ಠನಾಗಿರಲಾರ.

**– ಗುರು ಹಿರೇಮಠ, ಹಗರಿಬೊಮ್ಮನಹಳ್ಳಿ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಮಹೂವಾ ಮಹೂವಾ

ಇತ್ತೀಚಿಗೆ, ಭಾರತದ ಪ್ರಸಿದ್ಧ ಭಾಷಾವಿಜ್ಞಾನಿಗಳಲ್ಲಿ ಒಬ್ಬರಾದ ಗಣೇಶ್ ದೇವಿಯವರು, ಗುಜರಾತಿನ ತೇಜಗಢ ಎಂಬಲ್ಲಿ ಸ್ಥಾಪಿಸಿರುವ ಆದಿವಾಸಿ ಅಕಾಡೆಮಿಗೆ ಭೇಟಿಕೊಡುವ ಅವಕಾಶ ಬಂದಿತು. ಇಲ್ಲಿ ರಾಠವಾ ಆದಿವಾಸಿಗಳ ಮ್ಯೂಸಿಯಂ ಇದೆ. ವಸತಿ ಶಾಲೆಯಿದೆ. ಕರಕುಶಲ ಉದ್ಯಮವಿದೆ. ಗ್ರಂಥಾಲಯವಿದೆ. ಭಾಷಾವನವಿದೆ. ಇದನ್ನೆಲ್ಲ ಆದಿವಾಸಿಗಳೇ ನಡೆಸಿಕೊಂಡು ಹೋಗುವರು. ಭಾಷಾವನದ ಉದ್ದೇಶವೆಂದರೆ, ಅಳಿಯುತ್ತಿರುವ ಆದಿವಾಸಿಗಳ ಭಾಷೆಗಳನ್ನು ಉಳಿಸುವುದು. ಇಲ್ಲಿ ಭಾಷೆ ಎಂದರೆ ಜನರಾಡುವ ಮಾತು, ಹೇಳುವ ಕತೆ, ಹಾಡುವ ಹಾಡು ಮಾತ್ರವಲ್ಲ. ಅವರ ಬದುಕಿನ ಸರ್ವಸ್ವವೂ ಆಗಿರುವ ಕಾಡು. ಕಾಡಿನೊಳಗಿನ ಅವರ ಜೀವನಕ್ರಮ, ಸಂಸ್ಕೃತಿ ಕೂಡ. ಭಾಷಾವನವು ಒಂದು ಆಧುನಿಕ ಹಾಡಿಯಂತಿದೆ. ಈ ಹಾಡಿಯಲ್ಲಿ ಭಾರತದ ಜನಭಾಷೆಗಳ ಉಯಿಲುಗಳಿವೆ. ನಾನು ಕನ್ನಡದ ಉಯಿಲನ್ನು ಬಿಚ್ಚಿನೋಡಿದೆ.

ಅಕಾಡೆಮಿಯ ಹಾಡಿಯ ಕ್ಯಾಂಪಸ್ಸಿನ ತುಂಬ ಮಹೂವಾ ಮರಗಳಿವೆ. ರಾಠವಾಗಳ ಬದುಕಿನಲ್ಲಿ ಮಹತ್ವದ ಸ್ಥಾನ ಪಡೆದಿರುವ ವೃಕ್ಷವಿದು. ಕ್ಯಾಂಪಸ್ಸನ್ನು ಪ್ರವೇಶಿಸಿದೊಡನೆ ಹಳೆಯ ಮಹೂವಾ ಮರದ ಒಣಗಿದ ಬೊಡ್ಡೆಯಿದೆ. ಅದರ ಬುಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿಯವರ ಅಸ್ಥಿಗಳನ್ನು ಹೂಳಲಾಗಿದೆ. ಅದು ಅವರ ಬಾಳಿನ ಕೊನೆಯ ಅಪೇಕ್ಷೆಯಾಗಿತ್ತು. ಅವರ ಸ್ಮಾರಕದ ಮೇಲೆ 'ಎಲ್ಲ ಕನಸುಗಳಿಗೂ ಬದುಕುವ ಅಧಿಕಾರವಿದೆ' ಎಂಬ ಅವರದೇ ಮಾತನ್ನು ಕೆತ್ತಲಾಗಿದೆ. ಮಹಾಶ್ವೇತಾದೇವಿ, ಜೀವನವಿಡೀ ಬುಡಕಟ್ಟು ಜನರ ಕಾಡಿನ ಸ್ವಾಯತ್ತತೆಗಾಗಿ ಹೋರಾಡಿದವರು. ನಾನು ಹೋದಾಗ ಮಹೂವಾ ಹೂವಿನ ಕಾಲ ಮುಗಿದು ಹಣ್ಣಿನ ಕಾಲ ಬಂದಿತ್ತು. ಹಕ್ಕಿಗಳು ಬಾವಲಿಗಳು ಈ ಹಣ್ಣನ್ನು ತಿಂದು ಬೀಜವನ್ನು ನೆಲಕ್ಕೆ ಉಗಿದಿದ್ದವು. ಮರದಡಿ ಬಿದ್ದಿದ್ದ ಬೀಜಗಳನ್ನು ಎತ್ತಿ ಅಂಗೈಯಲ್ಲಿ ಇರಿಸಿಕೊಂಡೆ. ಕಪ್ಪುವಜ್ರಗಳಂತೆ ಫಳಫಳಿಸುತ್ತಿದ್ದವು. ನಾವು ಮೋಹೆ ಎಂದು ಕರೆಯುತ್ತಿದ್ದ ಹಿಪ್ಪೆಯ ಬೀಜಗಳು. ಅವನ್ನು ನೋಡುತ್ತಿದ್ದಂತೆ ಈ ಮರಗಳ ಅಡಿಯಲ್ಲಿಯೇ ನನ್ನ ಬಾಲ್ಯ ತಾರುಣ್ಯ ಕಳೆದಿದ್ದು ನೆನಪಾಯಿತು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಬೆಂಗಳೂರು–ಹೊನ್ನಾವರ ಹೆದ್ದಾರಿಯು ತರೀಕೆರೆ ಪಟ್ಟಣದೊಳಗಿಂದ ಹಾಯುವ ಎರಡೂ ಬದಿ ಪ್ರಾಚೀನ ಹಿಪ್ಪೆಯ ಅಥವಾ ಮಹೂವಾ ಮರಗಳಿವೆ. ಏಕೀಕರಣದ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಲೋಕೋಪಯೋಗಿ ವಿಭಾಗವು ನೆಟ್ಟ ಈ ಮರಗಳು ಬೃಹದಾಕಾರ ಬೆಳೆದಿದ್ದವು. ಅವುಗಳ ಬದಿಯಲ್ಲಿ ಓಡಾಡುವಾಗ ಮಾದಕವಾದ ಪರಿಮಳ ಹೊಮ್ಮುತ್ತಿತ್ತು. ತುಸುಹೊತ್ತು ಕುಳಿತರೆ ನಶೆಯೂ ಏರುತ್ತಿತ್ತು. ಹೂವಿನ ಮಕರಂದಕ್ಕಾಗಿ ಮುತ್ತಿಕೊಂಡ ದುಂಬಿಗಳಿಂದ ಮರವೇ ಸಂಗೀತ ಗೋಷ್ಠಿ ಆಗುತ್ತಿತ್ತು. ಮಳೆಗಾಲದಲ್ಲಿ ಇದರ ಕಾಯಿಗಳನ್ನು ನಾವು ಕಿತ್ತು, ಹಣ್ಣಾಗಿಸಿ ಹಿಸುಕಿ ಬೀಜವನ್ನು ತೆಗೆಯುತ್ತಿದ್ದೆವು. ನಸುಕು ಹರಿಯುವ ಮುನ್ನವೇ ಹೋಗಿ ಒದ್ದೆಯಾದ ಹುಲುಬೆಳೆದ ನೆಲದಲ್ಲಿ ಬಾವಲಿಗಳು ತಿಂದುಗಿದ ಇದರ ಬೀಜಗಳನ್ನು ಹೆಕ್ಕುತ್ತಿದ್ದೆವು. ನಮ್ಮೂರ ಅಂಗಡಿ ರಝಾಕ್ ಇವನ್ನು ಕೊಳ್ಳುತ್ತಿದ್ದನು. ಈ ಬೀಜದ ಕವಚಗಳನ್ನು ಬೆರಳಿಗೆ ಹಾಕಿಕೊಂಡು ಹುಲಿಯುಗುರು ಮಾಡಿಕೊಳ್ಳುತ್ತಿದ್ದೆವು.



ನಮ್ಮ ಪರಿಸರದಲ್ಲಿದ್ದ ಸಾಮಾನ್ಯ ವೃಕ್ಷವಾಗಿದ್ದ ಮಹೂವಾ, ಆದಿವಾಸಿಗಳ ಬದುಕಿನಲ್ಲಿ ಮಹತ್ವದ ಸ್ಥಾನ ಪಡೆದಿದೆ; ಇದರ ಎಣ್ಣೆಯಿಂದ ಸೋಪು ತಯಾರಿಸಲಾಗುತ್ತದೆ ಔಷಧಕ್ಕೂ ಹೋಗುತ್ತದೆ ಎಂದು ನಮಗೆ ಗೊತ್ತಿತ್ತು. ಆದರೆ ಇದರ ಹೂವಿನಿಂದ ಮದ್ಯ ತಯಾರಿಸಲಾಗುತ್ತದೆ ಎಂದು ಗೊತ್ತಿರಲಿಲ್ಲ. ಇದು ಗೊತ್ತಾಗಿದ್ದು ಕವಿ ಬಂಜಗೆರೆ ಜಯಪ್ರಕಾಶರ 'ಮಹೂವಾ' ಕವಿತೆ ಓದಿದಾಗ. ಮಧ್ಯಭಾರತದ ಬುಡಕಟ್ಟುಗಳ ಹೋರಾಟದ ಪ್ರತೀಕವಾಗಿ ಈ ಹೂವನ್ನು ಅವರ ಕವನ ಚಿತ್ರಿಸುತ್ತದೆ.

ಮಹೂವಾ ಸಪೋಟ ಕುಟುಂಬಕ್ಕೆ ಸೇರಿದ ಸಸ್ಯ. ಭಾರತದಲ್ಲಿ ಪೂರ್ವ ಪಶ್ಚಿಮವಾಗಿ ಹರಿದಿರುವ, ಮಹಾರಾಷ್ಟ್ರ ಗುಜರಾತ್ ಮಧ್ಯಪ್ರದೇಶ ಜಾರ್ಖಂಡ್ ಛತ್ತೀಸಘಡ್ ಒಡಿಸ್ಸಾ ಮತ್ತು ಬಂಗಾಳದ ಕಾಡುಗಳಲ್ಲಿ ಇದು ಬೆಳೆಯುತ್ತದೆ. ಇದು ಮಧ್ಯಭಾರತದ ಆದಿವಾಸಿಗಳ ಕಾರಿಡಾರ್ ಕೂಡ. ಗುಜರಾತಿನ ಛೋಟೆ ಉದಯಪುರ್–ಪಂಚಮಹಲ್–ಬರೋಡಾ ಜಿಲ್ಲೆಗಳ ಅರಣ್ಯಗಳಲ್ಲಿ ವಾಸವಾಗಿರುವ ಆದಿವಾಸಿಗಳು, ಇದರ ಹೂವನ್ನು ಒಣಗಿಸಿ ಮಾರುವರು. ಇದರ ಬೀಜದ ಎಣ್ಣೆಯನ್ನು ಅಡುಗೆಗೆ ಬಳಸುವರು. ಇದರ ಕಟ್ಟಿಗೆಯಲ್ಲಿ ತಮ್ಮ ದೈವಗಳನ್ನು ಕೆತ್ತುವರು. ಅವರು ಹೇಳುವ ಕತೆ ಹಾಡುಗಳಲ್ಲಿ, ಬರೆವ ಚಿತ್ರಗಳಲ್ಲಿ ಈ ಮರದ ಉಲ್ಲೇಖವಿದೆ.

ರಾಠವಾಗಳ ತಮ್ಮ ನೃತ್ಯ ಹಾಡಿಕೆ ಕತೆ ಚಿತ್ರಗಳಿಗೆ ಹೆಸರಾದವರು. ಇಲ್ಲಿ ಮನೆಗೊಬ್ಬ ಕೊಳಲುವಾದಕ ಇದ್ದಾನೆ. ಅಕಾಡೆಮಿಯಲ್ಲಿ ಶಾಲೆಮಕ್ಕಳಿಗೆ ಕೊಳಲು ಕಲಿಸುವ ಒಬ್ಬ ಗಾಯಕ ನಮ್ಮನ್ನು ಕೊಳಲು ವಾದನದಿಂದ ಸ್ವಾಗತಿಸಿದನು. ಈತ ಕೊಳಲು ನುಡಿಸುವಾಗ, ಮಕ್ಕಳು ಒಬ್ಬರ ಹೆಗಲಿಗೆ ಮತ್ತೊಬ್ಬರು ಕೈಯಿಟ್ಟು ಸರಪಳಿ ಮಾಡಿಕೊಂಡು ಹಿಂದಕ್ಕೂ ಮುಂದಕ್ಕೂ ಚಲಿಸುವ ಅದ್ಭುತ ನೃತ್ಯ ಮಾಡಿದರು. ರಾಠವಾಗಳ ನೃತ್ಯ ಕುಣಿತ ಹಾಡಿಕೆ ಕೇಳಬೇಕಾದರೆ ಹೋಳಿ ಇಲ್ಲವೇ ದೀಪಾವಳಿಗೆ ಹೋಗಬೇಕು. ರಾಠವಾಗಳ ಪಿಥೋರಿ ಚಿತ್ರಕಲೆ ಪ್ರಸಿದ್ಧವಾದುದು. ಮನೆಯ ಗೋಡೆಗಳ ಮೇಲೆ ಬಿಡಿಸುವ ಈ ಚಿತ್ರಗಳಲ್ಲಿ ಇಡೀ ಸಮುದಾಯದ ಆಚರಣೆಗಳಿವೆ. ಅದರಲ್ಲಿ ಮಹೂವಾ ಮದ್ಯದ ಭಟ್ಟಿ ಇಳಿಸುವ ಚಿತ್ರಗಳೂ ಇವೆ. ಒಂದು ಚಿತ್ರದಲ್ಲಿ ನೇತುಬಿದ್ದ ಬಾವಲಿಗಳು ಮಹೂವಾ ಹಣ್ಣನ್ನು ತಿನ್ನುತ್ತಿವೆ. ಈ ಭಿತ್ತಿಚಿತ್ರವನ್ನು ಮಹೂವಾದ ಪಾನೀಯ ಸೇವಿಸಿ ಕಲಾವಿದರು ರಚಿಸುತ್ತಾರಂತೆ. ಸ್ವಲ್ಪ ಹೆಚ್ಚಾಗಿ ಸೇವಿಸಿದ್ದರಿಂದಲೊ ಏನೊ, ಕೆಲವು ಕಡೆ ಚಿತ್ರದಲ್ಲಿ ಕುದುರೆಮೂತಿ ಮನುಷ್ಯರದಾಗಿತ್ತು. ತೇಜಗಢದ ಅಕಾಡೆಮಿಯ ವಸ್ತುಸಂಗ್ರಹಾಲಯದಲ್ಲಿ ಭಟ್ಟಿಯಿಳಿಸುವ ಮಡಕೆ ಒಲೆಗಳನ್ನು ಇಡಲಾಗಿದೆ.

ಮಹೂವಾಕ್ಕೂ ಸ್ವಾತಂತ್ರ್ಯ ಹೋರಾಟಕ್ಕೂ ಸಂಬಂಧವಿದೆ. ಬ್ರಿಟಿಶರು ಮಹೂವಾ ಹೂವಿನಿಂದ ಆದಿವಾಸಿಗಳು ಮದ್ಯ ತಯಾರಿಕೆಗೆ ನಿಷೇಧ ಹೇರಿದರು. ಆದಿವಾಸಿಗಳು ತಮ್ಮ ಆಹಾರ ಪಾನೀಯ ಹಕ್ಕಿಗಾಗಿ ಹೋರಾಟ ಆರಂಭಿಸಿದರು. ಅದು ಕಾಡಿನ ಸ್ವಾಯತತ್ತೆ ಉಳಿಸಿಕೊಳ್ಳುವ ಹೋರಾಟವಾಗಿ ಬದಲಾಯಿತು. ನಮ್ಮಲ್ಲಿ ಬ್ರಿಟಿಶರನ್ನು ಕಂಗೆಡಿಸಲು ಈಚಲು ಮರವನ್ನು ಕಡಿವ ಚಳುವಳಿಯಿದ್ದರೆ, ಇಲ್ಲಿ ಮಹೂವಾ ಉಳಿಸಿಕೊಳ್ಳುವ ಚಳುವಳಿ. ಈಗಲೂ ಆದಿವಾಸಿ ಆಹಾರ ಪದ್ಧತಿ ಪಾನೀಯ ಪದ್ಧತಿಗಳು ಅನಾಗರಿಕವೆಂದೂ, ಅವನ್ನು ಅವರಿಂದ ಬಿಡಿಸಬೇಕೆಂದು ಕೆಲವರು ನಾಗರಿಕ ಎನಿಸಿಕೊಂಡ ಕೆಲವು ಸಂಘಟನೆಗಳು ಯತ್ನಿಸುತ್ತಿವೆ. ಇದು ಆದಿವಾಸಿಗಳನ್ನು ಜಗತ್ ಮತ್ತು ಭಗತ್ ಎಂದು ವಿಂಗಡಿಸಿದೆ. ಆದರೆ ಮಾಂಸಸೇವನೆ, ಮಹೂವಾ ಮದ್ಯ ಸೇವನೆಗಳು, ಕುಣಿತ ಹಾಡಿಕೆ ಚಿತ್ರಕಲೆಯಷ್ಟೆ ಆದಿವಾಸಿಗಳ ಬದುಕಿನ, ಆರೋಗ್ಯದ ಮತ್ತು ಸಾಂಸ್ಕೃತಿಕ ಆಚರಣೆಗಳ ಭಾಗವಾಗಿವೆ ನಾಗರಿಕ ಸಮಾಜಗಳ ಅಹಮಿಕೆಯೆಂದರೆ ತಮ್ಮ ಜೀವನ ದೃಷ್ಟಿಕೋನವೇ ಶ್ರೇಷ್ಠವೆಂದು ಭಾವಿಸುವುದು. ಅದರ ಮೂಲಕ ಆದಿವಾಸಿಗಳ ಜೀವನಕ್ರಮವನ್ನು ಮೌಲ್ಯಮಾಪನ ಮಾಡುವುದು. ಅದನ್ನು ತಿದ್ದಲು ಹವಣಿಸುವುದು. ಆದಿವಾಸಿಗಳ ಜೀವನಕ್ರಮ ಎಂದೂ ಬದಲಾಗದ ಸ್ಥಗಿತಚಿತ್ರವಲ್ಲ. ಆದರೆ ಬದಲಾವಣೆಯು ಹೊರಗಿನ ಹೇರಿಕೆಯಾಗಬಾರದು. ಅದು ಅವರೊಳಗಿನ ಪ್ರಜ್ಞಾವಂತರಿಂದಲೇ ಸಹಜವಾಗಿ ಸಂಭವಿಸಬೇಕು. ಈ ಪ್ರಜ್ಞಾವಂತರು, ಹೊರಗಿನ ಪ್ರಭಾವಗಳಲ್ಲಿ ತಮಗೆ ಬೇಕಾದ್ದನ್ನು ಸ್ವೀಕರಿಸುತ್ತ, ಬೇಡವಾದ್ದನ್ನು ಪ್ರತಿರೋಧಿಸುತ್ತ, ಬದಲಾಗುತ್ತ, ತಮ್ಮ ಭಾಷೆ ಸಂಸ್ಕೃತಿ ಕಾಡನ್ನು ಉಳಿಸಿಕೊಳುವುದಕ್ಕೆ ಹೋರಾಡುತ್ತ ಬಂದಿದ್ದಾರೆ. ಈ ಹೋರಾಟವನ್ನು ಮಾಡಲು ಅವರಿಗೆ ಪ್ರೇರಣೆ ಕೊಟ್ಟ ಸಂಗತಿಗಳಲ್ಲಿ ಮಹೂವ ಕೂಡ ಒಂದು. ಇದರ ಹೂವು ಮತ್ತು ಬೀಜಗಳ ಉಪಯುಕ್ತತೆ ಇದನ್ನು ದೈವೀಕರಿಸಿದೆ. ಬೌದ್ಧರಿಗೆ ಬೋಧಿವೃಕ್ಷದಂತೆ, ಸೋಲಿಗರಿಗೆ ದೊಡ್ಡಸಂಪಿಗೆ ಮರದಂತೆ.

ನಮ್ಮ ತಂಡದಲ್ಲಿದ್ದ ಒಬ್ಬ ಮಹಿಳೆ, ಮಹಾಶ್ವೇತಾದೇವಿ ಅಸ್ಥಿಯಿರುವ ಹಳೆಯ ಮಹೂವಾ ವೃಕ್ಷದ ಬುಡದಲ್ಲಿ ಹೊಸ ಮಹೂವಾ ಸಸಿಯನ್ನು ನೆಟ್ಟರು. ನಾನು ಗುದ್ದಲಿ ಎತ್ತಿಕೊಂಡು ಅದರ ಬುಡಕ್ಕೆ ಮಣ್ಣನ್ನೆಳೆದು ಪಾತಿಮಾಡಿದೆ. ಅಲ್ಲಿದ್ದ ಆದಿವಾಸಿಗಳಿಗೆ ಕೇಳಿದೆ:

"ಇದು ಹೂಹಣ್ಣು ಬಿಡಲು ಎಷ್ಟುವರ್ಷ ಬೇಕು?"

"20 ವರ್ಷ"

"20 ವರ್ಷ ಬಿಟ್ಟು ಬರುತ್ತೇನೆ. ನನಗೆ ಇದರ ಹೂವಿನ ರಸದಿಂದ ಮಾಡಿದ ಪಾನೀಯ ಕೊಡಬೇಕು"

ರಸ್ತೆಯ ಅಗಲೀಕರಣದಲ್ಲಿ ನಮ್ಮೂರಿನ ಮಹೂವಾಗಳೆಲ್ಲ ಕಣ್ಮರೆಯಾದವು. ಅವುಗಳ ಹಣ್ಣಿಗಾಗಿ ಬರುತ್ತಿದ್ದ ಬಾವಲಿಗಳು ಕೂಡ ಕಾಣುತ್ತಿಲ್ಲ. ಅವುಗಳ ಬೀಜ ಕೊಳ್ಳುತ್ತಿದ್ದ ರಜಾಕನೂ ತೀರಿಕೊಂಡನು. ಹೀಗೆ ಮರೆಯಾದ ವೃಕ್ಷವು ದೂರದ ಗುಜರಾತಿನಲ್ಲಿ ದರ್ಶನ ಕೊಟ್ಟಿದ್ದು, ಕಳೆದುಹೋದ ಬಂಧುವನ್ನು ಭೇಟಿಯಾದಂತೆ ಖುಶಿ ಕೊಟ್ಟಿತು. ನಾನು ಆರಿಸಿಕೊಂಡಿದ್ದ ಮಹೂವಾ ಬೀಜಗಳನ್ನು ಭದ್ರವಾಗಿ ಇಟ್ಟುಕೊಂಡು ಹಂಪಿಗೆ ಮರಳಿದೆ. ತೇಜಗಢಕ್ಕೆ ಹೋಳಿ ಕಾಲಕ್ಕೆ ಹೋಗಬೇಕು.

# ಎಪ್ಪತ್ತು ಗಿರಿಗಿಂತ ಅಧಿಕ ಕಪ್ಪತಗಿರಿ

ಏಷ್ಯಾ ಖಂಡದಲ್ಲಿಯೇ ಅತಿ ಶುದ್ಧ ಗಾಳಿ ಬೀಸುವ ಪ್ರದೇಶ ಹೊಂದಿರುವ ಗದಗ ಜಿಲ್ಲೆ ಅಂಧರ ಬಾಳಿನ ಬೆಳಕು, ತ್ರಿವಿಧ ದಾಸೋಹಿಗಳೆನಿಸಿದ ಪಂಡಿತ ಪುಟ್ಟರಾಜ ಗವಾಯಿಗಳು ನಡೆದಾಡಿದ ಪುಣ್ಯ ತಪೋಭೂಮಿಯಾಗಿದ್ದು ಈ ಜಿಲ್ಲೆಯಲ್ಲಿರುವ ಕಪ್ಪತ್ತಗುಡ್ಡ ಪ್ರವಾಸ ಪ್ರಿಯರ, ಚಾರಣಿಗರ ನೆಚ್ಚಿನ ತಾಣ. ಹಚ್ಚ ಹಸಿರಿನಿಂದ ಕೂಡಿದ ತರುಲತೆಗಳ ವಿಹಂಗಮ ನೋಟ, ಭೂಮಿಯ ಮೇಲೆ ಶಾಶ್ವತವಾಗಿ ಹಸಿರಿನ ಹೊದಿಕೆ ಹೊದ್ದು ಮಲಗಿರುವ ಬೆಟ್ಟಗಳ ಸಾಲು, ಭೂರಮೆಯ ಮಡಿಲಲ್ಲಿ ಕಾಪಿಟ್ಟುಕೊಂಡು ಅಸಂಖ್ಯಾತ ಪ್ರವಾಸಿಗರನ್ನು, ಔಷಧಿ ತಜ್ಞರನ್ನು ಕೈಬೀಸಿ ಕರೆಯುವ ಮನಮೋಹಕ ಸ್ಥಳ ಕಪ್ಪತ್ತಗುಡ್ಡ. ಅಪಾರ ಖನಿಜ ಸಂಪತ್ತಿನ ಆಗರ, ಜೀವವೈವಿಧ್ಯ ತಾಣ, ಬಹುವಿಧದ ಔಷಧೀಯ ಸಸ್ಯ, ಚಿನ್ನ, ಮ್ಯಾಂಗನೀಸ್ ಸೇರಿದಂತೆ ಉತ್ಕೃಷ್ಟ ಖನಿಜ, ಹಲವು ವನ್ಯಜೀವಿ ಸಂಪತ್ತಿನಿಂದ ಕೂಡಿದ ನೈಸರ್ಗಿಕ ಪ್ರದೇಶ. ಕೆಂಪು ಮಿಶ್ರಿತ ಮೃತ್ತಿಕೆಯ ಮೂಲವಾಗಿರುವ ಕಪ್ಪತ್ತಗುಡ್ಡ ಸುಮಾರು 63 ಕಿ.ಮೀ. ಪ್ರದೇಶವ್ಯಾಪ್ತಿಯಲ್ಲಿದ್ದು ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ಗಳಲ್ಲಿ ಹರಡಿಕೊಂಡಿದೆ.



### ಕಡು ಹಸಿರಿನ ಪ್ರಾಕೃತಿಕ ತಾಣ:

ಹಚ್ಚ ಹಸಿರಿನ ಗಿಡಮರಗಳ ಹೊಯ್ದಾಟ, ತೂಗಾಟದ ನಡುವೆ ಪ್ರವಾಸಿಗರ, ಪ್ರಕೃತಿ ಪ್ರಿಯರ ಮನಸ್ಸಿನಲ್ಲಿ ಆಹ್ಲಾದ ಭಾವಕ್ಕೆ ಕಾರಣವಾಗುವ ಕಪ್ಪತ್ತಗುಡ್ಡ ತನ್ನ ಮೈತುಂಬಿ ಬಳುಕುವ ಹಸಿರುಟ್ಟ ಮೈಮಾಟ, ನೋಡುಗರ ಹೃನ್ಮನಗಳನ್ನು ತಣಿಸುವ ಮನಮೋಹಕ ಒಯ್ಯಾರಕ್ಕೆ ಹೆಸರುವಾಸಿ.

ಪ್ರಾಕೃತಿಕವಾಗಿ ಒಂದಕ್ಕೊಂದು ಒರಗಿರುವಂತೆ ಸಂಯೋಜನೆಗೊಂಡಿರುವ ಬೆಟ್ಟಗಳ ಸಾಲು, ಅವುಗಳಲ್ಲಿ ಅಡಕವಾದ ಪಚ್ಚ ಹಸಿರಿನ ಗಿಡಮರಗಳ ಲೋಲಾಟ, ಅವುಗಳ ಮಧ್ಯೆ ಹಾಗೂ ಮೇಲೆ ನಸುಕಿನಲಿ ಹಾಲು ಚೆಲ್ಲಿದ ಬೆಳದಿಂಗಳಂತೆ ಹರಡಿ ಅಲ್ಲಲ್ಲಿ ತಂಪಿನ ಸಿಂಚನ ಉಂಟು ಮಾಡುವ ಗಾಢ ಶ್ವೇತ ಮಂಜಿನ ಮಜಲು ವರ್ಣನಾತೀತವಾದದ್ದು.

### ಔಷಧೀಯ ಸಸ್ಯಗಳ ಆಗರ:

ಔಷಧೀಯ ಸಸ್ಯಕಾಶಿ ಎನಿಸಿರುವ ಕಪ್ಪತ್ತಗುಡ್ಡ ತನ್ನ ಒಡಲಲ್ಲಿ ಸುಮಾರು 300 ರಿಂದ 400 ಬಗೆಯ ಬಹು ವಿಧದ ಔಷಧೀಯ ಸಸ್ಯಗಳನ್ನು ಹೊಂದಿದ್ದು ನಾಟಿ ವೈದ್ಯರ ಸಂಪನ್ಮೂಲ ಕೇಂದ್ರವಾಗಿ ಪರಿಣಮಿಸಿದೆ.

ಅನೇಕ ಆಯುರ್ವೇದ ವೈದ್ಯರು, ನಾಟಿ ವೈದ್ಯರು ಕಪ್ಪತ್ತಗುಡ್ಡಕ್ಕೆ ಭೇಟಿಕೊಟ್ಟು ಇಲ್ಲಿನ ಔಷಧಿ ಸಸ್ಯಗಳನ್ನು ಕೊಂಡೊಯ್ದು ಅನೇಕ ಖಾಯಿಲೆಗಳನ್ನು ಶಮನ ಮಾಡುತ್ತಾರೆ.

ಇಲ್ಲಿನ ಔಷಧೀಯ ಸಸ್ಯಗಳಲ್ಲಿ ಅಮೃತಬಳ್ಳಿ, ಅಶ್ವಗಂಧ, ಚದುರಂಗ, ದೇವಗಣಗಲೆ, ಕಾಡು ನಿಂಬೆ ಮುಂತಾದ ಹೆಸರಿಸಲಿಕ್ಕೆ ಬಾರದ ಅನೇಕ ಪ್ರಭೇದದ ಔಷಧೀಯ ಸಸ್ಯಗಳಿವೆ.

### ಜೀವ ವೈವಿಧ್ಯ ತಾಣ:

ಕಪ್ಪತ್ತಗುಡ್ಡದ ವನಸಂಪತ್ತು ಅನೇಕ ವನ್ಯ ಜೀವಿಗಳ ಆವಾಸ ಸ್ಥಾನವಾಗಿದೆ.

ಪ್ರವಾಸಿಗರನ್ನು ನೋಡಿ ದೂರದೂರದಿಂದಲೇ ಎಗರಿ ಎಗರಿ ಓಡುವ ಚಿಗರಿಗಳು, ಬಹು ಬಿಂಕವ ಪ್ರದರ್ಶಿಸುವ ಜಿಂಕೆಗಳು, ಕೇಕೆ ಹಾಕುವ ಕೇಕಿಗಳು, ಯಾರ ಉಸಾಬರಿ ಇಲ್ಲದೇ ಸಂಚರಿಸುವ ನರಿಗಳು, ತೋಳ, ಕರಡಿ ಮುಂತಾದ ಅನೇಕ ವನ್ಯ ಜೀವಿಗಳನ್ನು ಕಣ್ತುಂಬಿಕೊಳ್ಳಬಹುದು.

### ಐತಿಹಾಸಿಕ ದೇವಾಲಯಗಳು:

ಕಪ್ಪತ್ತಗುಡ್ಡ ಪರಿಸರದಲ್ಲಿ ಕಪ್ಪತ ಮಲ್ಲಿಕಾರ್ಜುನ, ಗಾಳಿ ಗುಂಡಿ ಬಸವಣ್ಣ ಮುಂತಾದ ದೇಗುಲಗಳಿದ್ದು ರಾಜ್ಯದ ನಾನಾ ಭಾಗಗಳಿಂದ ಈ ಐತಿಹಾಸಿಕ ದೇಗುಲಗಳಿಗೆ ಅನೇಕ ಭಕ್ತರು, ಪ್ರವಾಸ ಪ್ರಿಯರು, ಪರಿಸರ ಪ್ರಿಯರು ವರ್ಷದುದ್ದಕ್ಕೂ ಭೇಟಿ ನೀಡಿ ಇಷ್ಟಾರ್ಥಸಿದ್ಧಿ ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ.

ಒಟ್ಟಾರೆಯಾಗಿ ಕಪ್ಪತ್ತಗುಡ್ಡ ತನ್ನ ಒಡಲಲ್ಲಿ ಅನೇಕ ವಿಶಿಷ್ಟ, ನಿಗೂಢ ಚೇತನಗಳನ್ನು, ನಿಕ್ಷೇಪಗಳನ್ನು ಹುದುಗಿಸಿಟ್ಟುಕೊಂಡ ಅಮೂಲ್ಯವಾದ ಪ್ರದೇಶವಾಗಿದ್ದು, ಶುದ್ಧ ಗಾಳಿ, ಅಚ್ಚರಿ ಮೂಡಿಸುವ ದಿವ್ಯೌಷಧ ಮೂಲಿಕೆಗಳು ಮುಂತಾದ ವಿಶೇಷತೆಗಳಿಗೆ ಜಗದ್ವಿಖ್ಯಾತಿ ಪಡೆದಿದೆ.

**– ಎಸ್.ಎಚ್.ಸೋಮಶೇಖರ ಶಿಕ್ಷಕರು.**









**ಕವಿ ಮನಸು**

## ರಾಮನ ನೊಸಲಿಗೆ ಸೂರ್ಯನ ತಿಲಕ



ಚೈತ್ರದ ಶುಕ್ಲದ ನವಮಿಯ ದಿನದಲಿ
ಬುವಿಯಲಿ ರಾಮನ ಅವತಾರ
ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆಯಲು
ಮಾಡಿದ ದನುಜರ ಸಂಹಾರ

ರಾಮನ ನೊಸಲಿಗೆ ಚಂದದ ತಿಲಕವ
ಇರಿಸಿದೆ ಸೂರ್ಯನ ಹೊಂಗಿರಣ
ಎಂತಹ ಸುಂದರ ಕ್ಷಣವಿದು ಎನಿಸಿದೆ
ಧನ್ಯತೆ ಪಡೆಯಿತು ಈ ನಯನ

ಪೃಥ್ವಿಯ ಒಡೆಯನ ಸುಂದರ ನಗುಮೊಗ
ಜಾನಕಿ ರಮಣನ ಸೌಂದರ್ಯ
ಭಕ್ತರ ರಸನದಿ ರಾಮನ ನಾಮವು
ಕೇಳಲು ಎಂತಹ ಮಾಧುರ್ಯ

ಹೃದಯದ ಗುಡಿಯಲಿ ಭಕ್ತಿಯ ಪೂಜೆಯ
ನಡೆಸುತಲಿರುವನು ಹನುಮಂತ
ಮಾತೆಯನರಸಲು ಶರಧಿಯ ದಾಟಿದ
ಸಾಟಿಯು ಇಲ್ಲದ ಧೀಮಂತ॥

**ಪೆರ್ಮುಖ ಸುಬ್ರಹ್ಮಣ್ಯ ಭಟ್**

## ಮಹಾಮಾತೆ

ಮಕ್ಕಳಿಗೆ ಅಪ್ಯಾಯವಾದ ಅಮ್ಮ
ನಿಮ್ಮ ಮಮತೆಯ ಮಡಿಲು ಸಾಥ9ಕವಮ್ಮ
ಕಂದಗಳಿಗೆ ಚೆಂದದೊಲವ ಚಿಮ್ಮಿ
ಕಿಂಚಿತ್ತೂ ಆಗದಂತೆ ಆನಂದ ಕಮ್ಮಿ

ಮಕ್ಕಳಿಗೆ ಅಪರಿಮಿತ ಪ್ರೀತಿ ನೀಡಿ
ಖುಷಿ ಕಂಡಿತು ಮನ ಮಕ್ಕಳ ಪ್ರಗತಿ
ನೋಡಿ
ಬದುಕಿನುದ್ದಕ್ಕೂ ಮಕ್ಕಳ ಮಮತೆಗಾಗಿ
ಹೋರಾಡಿ
ತನ್ನಯ ಹಳವಂಡಗಳ ಹೊರದೂಡಿ

ಬಂದ ಬವಣೆಗಳ ಬಡಿದು
ಮಕ್ಕಳ ಹಿತಕ್ಕೆ ದುಡಿದು
ತನ್ನ ಆಕಾಂಕ್ಷೆಗಳಿಗೆ ತಿಲಾಂಜಲಿ ಇಟ್ಟು
ಮಕ್ಕಳ ಸೌಖ್ಯಕ್ಕೆ ತನ್ನ ಜೀವವ ಮುಡಿಪಿಟ್ಟು

ಸದಾ ಬದುಕ ಸಾಗಿಸಿದಳು ಸಹನಾಮಯಿ
ಮಕ್ಕಳ ಬಹು ನೆಚ್ಚಿನ ವಾತ್ಸಲ್ಯಮಯಿ
ನಮ್ಮ ಕಾಪ9ಣ್ಯಗಳ ಕರಗಿಸಿದ ಕಡು
ಕರುಣಾಮಯಿ

ಸಿಡುಕುಗೊಂಡಾಗ ರಮಿಸಿ ಕಚ ನೇವರಿಸಿ
ಉದಾತ್ತ ಉಲ್ಲಾಸದ ಊಟವ ಉಣಬಡಿಸಿ
ಪ್ರವಧಿ9ಸಿದಳು ಪುತ್ರ,ಪುತ್ರಿಯರ ಪುಷ್ಟಿ
ಬಿಗಿಯಾಗಿ ಹಿಡಿದು ಮಮತೆಯ ಮುಷ್ಟಿ
ಸಿಗಲಿಲ್ಲ ಬಹು ದಿನದವರೆಗೆ ಮಾತೃ
ಮಮತೆ
ಸದಾ ಕಾಡುತಿದೆ ಮನಕೆ ಇರದಿರುವ
ಕ್ಷಮತೆ
ಮಹಾತಾಯಿ ಆದಳು ನಮಗೆ
ಶಿರಬಾಗಿ ನಮಿಸುವೆವು ತಾಯಿ ಸದಾ
ನಿಮಗೆ.

**ಎಸ್.ಎಚ್.ಸೋಮಶೇಖರ,**
**ಮಾಗಳ.**

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ**
ಡಿ.ವಿ.ಜಿ.

## ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ರಾಮ ರಘುನಾಥಾ

ಇಂದು ದೇಶದೆಲ್ಲೆಡೆ ರಾಮನವಮಿಯ ಸಂಭ್ರಮ, ಸೀತಾರಾಮ ಕಲ್ಯಾಣೋತ್ಸವದ ವೈಭವ. ಆಂಜನೆಯ, ಶ್ರೀರಾಮನ ದೇವಸ್ಥಾನಗಳಲ್ಲಿ ಪಾನಕ–ಕೋಸಂಬರಿ– ಪಾಯಸ–ಕೇಸರಿಬಾತಿನ ಪ್ರಸಾದದ ಘಮ. ಚೈತ್ರ ಮಾಸದಲ್ಲಿ ನಡೆವ ಶ್ರೀರಾಮಾಯಣದ ಕೀರ್ತನಂ–ಶ್ರವಣಂ. ಇದು ಆಸಕ್ತ ಕೇಳುಗರಿಗೆ ರಾಮಯುಗಕ್ಕೆ ಕರೆದೊಯ್ಯುವುದು. ಹಬ್ಬವನ್ನುಂಟು ಮಾಡುವುದು.ಇದು ಒಂದೆಡೆಯಾದರೆ, ಚೈತ್ರಮಾಸ ಶುಕ್ಲಪಕ್ಷ ನವಮಿಯ ಪುನರ್ವಸು ನಕ್ಷತ್ರ, ಮೇಷ ಲಗ್ನದಲ್ಲಿ, ಸೂರ್ಯ ವಂಶದ ದಶರಥನ ಕುಮಾರ–ಕೌಸಲ್ಯೆ ನಂದನ ಶ್ರೀರಾಮರ ಜನನ. ಸೃಷ್ಟಿಯ ಸ್ಥಿತಿ ಕರ್ತನಾದ ಮಹಾವಿಷ್ಣುವಿನ ದಶಾವತಾರದ ಏಳನೆಯ ಅವತಾರವೇ ಶ್ರೀರಾಮರು. ವೈಕುಂಠದ ದ್ವಾರಪಾಲಕರಾದ ಜಯ–ವಿಜಯರ 3 ಜನ್ಮದ ಶಾಪ ವಿಮೋಚನೆಗಾಗಿ ಅಂದರೆ, ತ್ರೇತಾಯುಗದಲ್ಲಿ ಕುಂಭಕರ್ಣ–ರಾವಣರ ವಧೆಗಾಗಿ, ವಿಷ್ಣುವೇ ರಾಮರಾಗಿ ಮಾನವ ಜನ್ಮದಲ್ಲಿ ಅವತಾರವಾದರೂ, ಸಾವಿರಾರು ವರ್ಷಗಳಿಂದ ಶಿಲಾ ರೂಪ ಪಡೆದಿದ್ದ, ಗೌತಮ ಮಹರ್ಷಿಯ ಪತ್ನಿ, ಅಹಲ್ಯೆಗೆ ವಿಮೋಚನೆ ಪಡೆಯಬೇಕಿತ್ತು. ಋಷಿ ಮುನಿಗಳಿಗೆ ತೊಂದರೆ ನೀಡುತ್ತಿದ್ದ ಸುಭಾಹು–ಮಾರೀಚರ ಸಂಹಾರ, ಯುದ್ಧ ಪೂರ್ವದಲ್ಲಿ ವಾಲಿ ವಧೆ ಆಗುವುದು, ಹೀಗೆ ಮೊದಲಾದ ಹತ್ತು ಹಲವು, ಊಹೆಗೂ ಮೀರಿದ ಕಾರಣಗಳಿದ್ದವು, ಭಗವಂತನು ಶ್ರೀರಾಮರಾಗಿ ಅವತಾರ ತಳೆಯಲು. ದಶರಥ ಮಹಾರಾಜರು ತಮ್ಮ ಮಂತ್ರಿ ಸುಮಾತ್ರರು ಮತ್ತು ಕುಲಗುರು ವಶಿಷ್ಠ ಮಹರ್ಷಿಗಳ ಸಲಹೆಯಂತೆ, ಋಷ್ಯಶೃಂಗರ ನೇತೃತ್ವದಲ್ಲಿ, ಪುತ್ರಕಾಮೇಷ್ಠಿಯಾಗ ಮಾಡಿ, ಶ್ರೀರಾಮ–ಲಕ್ಷಣ– ಭರತ–ಶತಘ್ನರನ್ನು ಮಕ್ಕಳಾಗಿ ಪಡೆದರೂ, ಭಗವಂತನ ರಾಮಾವತಾರ ಆಗುವುದು ಮೊದಲೇ ತಿಳಿದಿದ್ದ, ಸಮಸ್ತ ದೇವತೆಗಳ ಒಕ್ಕೂಟವೇ, ಪ್ರತಿ ಹೆಜ್ಜೆಗೂ, ಶ್ರೀರಾಮರಿಗೆ ಸೇವೆ ಸಹಾಯ ಮಾಡಲು, ಚತುರ್ಮುಖ ಬ್ರಹ್ಮರ ಆದೇಶದಂತೆ, ಮೊದಲೇ ಅವತಾರ ತಳೆದಿದ್ದರು. ಆದರೆ ಮಾನವರಾಗಿ ಅಲ್ಲ, ಬದಲಾಗಿ ವಾನರರಾಗಿ. "ವೃಕ್ಷ ವಾನರ ಗೋಪುಚ್ಛಃ " ಎನ್ನುವಂತೆ, ಬ್ರಹನ ಆಕಳಿಕೆಯಿಂದ ಬಂದ ಧರ್ಮ ಜಾಂಬವಂತನಾಗಿ, ಸೂರ್ಯನೇ ಸುಗ್ರೀವನಾಗಿ, ಇಂದ್ರನು ವಾಲಿಯಾಗಿ, ಮರುತನ ಮಗ ಮಾರುತಿಯಾಗಿ, ಸಾಕ್ಷಾತ್ ವಾಯುದೇವರೇ ಆಂಜನೆಯನಾಗಿ, ಅಗ್ನಿ ನೀಲನಾಗಿ, ಹೀಗೆ ಅಶ್ವಿನಿ ದೇವತೆಗಳು, ವಿಶ್ವಕರ್ಮರು ಹೀಗೆ ಎಲ್ಲಾ ದೇವತೆಗಳು ವಾನರ ಅವತಾರಗೈದು, ಶ್ರೀ ರಾಮರ ಸೇವೆಗೆ ಕಾಯುತ್ತಿದ್ದರು. ವಾನರೆಂದರೆ, ಕೇವಲ ಕಪಿಸೈನ್ಯ ಎಂತಷ್ಟೇ ಅರ್ಥವಲ್ಲ.

ಜೊತೆಗೆ ಶ್ರೀ ರಾಮನ ಅನುಜರ ಅವತಾರವಾದರೂ ಎಂಥಹದು!! ಕ್ಷೀರಸಾಗರದಲ್ಲಿ ವಿಷ್ಣುವಿನ ಶಯನವಾದ ಶೇಷನೇ ಲಕ್ಷ್ಮಣನಾಗಿದ್ದನು. ಸುದರ್ಶನ ಚಕ್ರಕ್ಕೆ ಅಭಿಮಾನಿ ದೇವತೆಯಾದ ಪ್ರದ್ಯುಮ್ನನ ದೇವತೆ ಸ್ಕಂದನೇ ಭರತನಾದರೆ, ಶಂಖದ ಅಭಿಮಾನಿ ದೇವತೆ ಅನಿರುದ್ಧರೇ ಶತೃಘ್ನರಾಗಿ ಜನ್ಮ ತಳೆದಿದ್ದರು. ಇನ್ನು ಶ್ರೀ ರಾಮಚಂದ್ರರ ಸೀತೆ, ಸಾಕ್ಷಾತ್ ಲಕ್ಷ್ಮಿ ಅವತಾರವೇ ಆಗಿದ್ದ "ಅವನಿ ಪುತ್ರಿ". ಇದು ಒಂದು ಭಾಗವಷ್ಟೇ.

ಶ್ರೀರಾಮರ ವ್ಯಕ್ತಿತ್ವ, ಆಳ್ವಿಕೆ, ಕುಟುಂಬಕ್ಕೆ ನೀಡಿದ ಪ್ರಾಮುಖ್ಯತೆ, ಆದರ್ಶ, ತಾಯ್ನಾಡಿಗೆ ನೀಡಿದ ಗೌರವ ಮತ್ತು ಸಮಸ್ತವೂ ರಾಮಮಯವೇ ಆಗಿರುವ, ಶ್ರೀರಾಮಾಯಣದ ಸಂದೇಶ ಪ್ರತಿಯೊಬ್ಬರಿಗೂ ಅನುಕರಣೀಯವಾದುದು, ಮಾದರಿ ಮತ್ತು ಆದರ್ಶವೇ ಆಗಿದೆ.



ಲೀಲಾವತಿ ಶಿವನಗೌಡ್ರು,
ಅಂಕಸಮುದ್ರ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಮೂಲ ರಾಮಾಯಣದಿಂದ, ವಾಲ್ಮೀಕಿ ರಾಮಾಯಣದ ನಂತರ, ಅನೇಕ ಕವಿಪುಂಗವರಿಂದ ರಚಿತವಾದ ರಾಮಾಯಣ ಕೃತಿಗಳಾದ, ಕಂಬ ರಾಮಾಯಣ, ರಾಮಚರಿತ ಮಾನಸ, ಅದ್ಭುತ ರಾಮಾಯಣ, ಆಧ್ಯಾತ್ಮ ರಾಮಾಯಣ, ಶ್ರೀ ರಾಮಾಯಣ ದರ್ಶನಂ ಗಳಂತಹ ಅನೇಕ ಕೃತಿ ಕಾವ್ಯಗಳು, ರಾಮನನ್ನು ಕೇಂದ್ರೀಕರಿಸಿ ಅವರದೇ ಆದ ವಿಭಿನ್ನದೃಷ್ಟಿಕೋನದಲ್ಲಿ ರಚಿತವಾಗಿವೆ. ಆದರೆ ಮಹಾನ್ ಮಹಾಕಾವ್ಯವಾದ ಶ್ರೀರಾಮಾಯಣ ಎಂದರೆ, ರಾಮಾಯಣದಲ್ಲಿ ಆರಂಭದಿಂದಲ್ಲೂ ಕೊನೆಯವರೆಗೂ ಶ್ರೀ ರಾಮರೇ ತುಂಬಿ ದರ್ಶಿಸಿ, ರಾಮಮಯವಾಗಿರುವುದು. ಇನ್ನೊಂದು ರಾಮ+ ಆಯಣ(ಆಯನ) ಪಥ ಮಾರ್ಗ ಎಂದಾಗಿ, "ರಾಮನೆಡೆ ಅಂದರೆ ಭಗವಂತನೆಡೆ ನಡೆಸುವುದು" ಅಂದರೆ ಮೋಕ್ಷದೆಡೆ ಕರೆದೊಯ್ಯುವುದು ಎಂದರ್ಥ. ಜೊತೆಗೆ ರಾಮಾಯಣ ಎಂದರೆ ಪ್ರತಿಯೊಬ್ಬರ ಬದುಕಿಗೂ ಬೇಕಾಗುವ ಸಂಸ್ಕಾರ, ಮಾನವೀಯತೆ, ಧರ್ಮಾಚರಣೆಗಳು, ಗುಣಾದರ್ಶಗಳೇ ಇರುವ ಬೃಹತ್ ಆದರ್ಶದ ಮಾದರಿ.

"ರಾಮರಾಜ್ಯ" ಎಂದರೆ ಅದು ಸಾಮಾನ್ಯವಲ್ಲ. ಅಲ್ಲಿ ಸಮಾನ ಪ್ರಜಾ ಸಂಹಿತೆ, ಗೌರವ, ಸಹಿಷ್ಣುತೆ, ಕಟ್ಟುನಿಟ್ಟಿನ ಸಮಾನ ಆಳ್ವಿಕಾ ನಿಯಮದೊಂದಿಗೆ ತ್ಯಾಗವೂ ಇದೆ."ವಸುದೈವ ಕುಟುಂಬಕಮ್" ನ ಭಾಂದವ್ಯವೂ ಇದೆ. ಪ್ರತಿ ದೇಶದ, ಪ್ರಜೆಯ ಆದರ್ಶ ನಾಡಿನ ಕನಸಾದ, "ರಾಮರಾಜ್ಯದ ಕನಸು" ನನಸು ಆಗಲು ಮುಖ್ಯವಾಗಿ'ಇಚ್ಛಾಶಕ್ತಿ' ಬೇಕು. ಕರ್ತವ್ಯದ ಕ್ರಿಯೆಯೊಂದಿಗೆ, ಅದರ ಅರಿವಿಗೆ ಜ್ಞಾನಶಕ್ತಿಯೂ ಅಗತ್ಯವಾಗಿ ಬೇಕು .

**ಅಯೋಧ್ಯೆಪುರಿ ರಾಜರ ಆದಶಗಳನ್ನು ಹೇಳುವುದಾದರೆ,**

ಆಸ್ಥಾನದಲ್ಲಿ ಕುಲಗುರು ವಶಿಷ್ಠ ಮಹರ್ಷಿ & ವಿಶ್ವಾಮಿತ್ರರಿಗೆ ಕೊಡುತ್ತಿದ್ದ ಗೌರವ. ಕುಟುಂಬದಲ್ಲಿಯೂ ಸಹ ಪರಸ್ಪರರ ಗೌರವ. ಹಾಗಾಗಿ ರಾಮರ ಫೋಟೋ ಎಲ್ಲಿಯೂ ರಾಮರೊಬ್ಬರೇ ಇರುವುದಿಲ್ಲ. ಅದು ಸೀತೆ, ಲಕ್ಷ್ಮಣ, ಆಂಜನೇಯ, ಹಿಂದೆ ಭರತ–ಶತೃಘ್ನರರೊಂದಿಗಿನ ಪರಿವಾರ ಫೋಟೋ ಆಗಿಯೇ ಇರುವುದು.

ಕುಟುಂಬದಲ್ಲಿ ಪತ್ನಿಗೆ ಕೊಡುವ ಗೌರವಕ್ಕೆ ಶ್ರೀರಾಮರೇ ಆದಶ9ರು. ಹಾಗಾಗಿ ಹೆಸರು, 'ಸೀತಾರಾಮ'ರಾಗಿರುವುದು. ಅವರ ದೇವಸ್ಥಾನಗಳು ಸಹ, "ಸೀತಾರಾಮ ದೇವಾಲಯ"ಗಳೇ ಆಗಿವೆ.

**ವನವಾಸದಲ್ಲಿದ್ದಾಗ ಭರತ–ಲಕ್ಷ್ಮಣ–ಶತೃಘ್ನರ ಭಾತೃಪ್ರೇಮ,**

ಇನ್ನು ದಶರಥರ ಆದರ್ಶ ಅಂದರೆ, ಉದಾಹರಿಸಬೇಕಾದರೆ, ಪುತ್ರಕಾಮೇಷ್ಠಿ ಯಾಗ ಮಾಡುವ ಮೊದಲು ಆಚರಿಸಬೇಕಾದ ಧರ್ಮಾಚರಣೆಗಳು, ಪ್ರತಿಯೊಬ್ಬ ಪ್ರಜೆಗೂ ಸಮಾನ ಪ್ರಾಶಸ್ತ್ಯ, ಪ್ರಜೆಗಳ ಆರೋಗ್ಯಕ್ಕೆ ತಕ್ಕನಾದ ಊಟೋಪಚಾರ. ಹೀಗೆ ದಶರಥರಿಗೆ ಸಮಾನ , ಹಿತವೇ ಪ್ರಜೆಗಳ ಮೇಲಿತ್ತು. ಅದರಂತೆ ಪ್ರಜಾ ಪ್ರೇಮಿ ರಾಮ, ತ್ರೇತಾಯುಗದಿಂದ ಇಂದಿನವರೆಗೂ ಆದರ್ಶರಾಗಿ ನಿಲ್ಲುವರು. ಇವು ಒಂದೆರಡು ನಿದರ್ಶನಗಳಷ್ಟೇ. ಪ್ರವಚನ–ಸತ್ಸಂಗ ಕೇಳಿದಾಗ, ಪುಸ್ತಕ ಓದಿದಾಗಲೇ, ಅವರ ಆಳ್ವಿಕೆಯ ವೈಭವ, ಪ್ರಜಾ ಆದರ್ಶವು ಕಣ್ಣಿಗೆ ಕಟ್ಟುವುದು. ಮತ್ತು ಮನಸ್ಸು ಅಂದು–ಇಂದಿನ ಹೋಲಿಕೆಯಲ್ಲಿ ತೊಡಗುವುದು.

ನಂತರ, ಶ್ರೀರಾಮರೆಂದರೆ ದಶರಥ & ಪತ್ನಿಯರು, ಅರಮನೆಗಷ್ಟೇ ಅಲ್ಲ, ಸಮೃದ್ಧವಾಗಿದ್ದ ಸಮಸ್ತ ಕೋಸಲ ದೇಶಕ್ಕೂ, ಅಯೋಧ್ಯೆ ಪುರಿಗೂ ಅತ್ಯಂತ ಪ್ರೀತಿ ಪಾತ್ರರು. ಪ್ರಜೆಗಳಿಗೆ ದಶರಥನಿಗಿಂತಲೂ ಶ್ರೀರಾಮನೇ ಅತ್ಯಂತ ಪ್ರಿಯ ಮತ್ತು ಒಡನಾಡಿಯಾಗಿ ಮಗನಂತೆ ಹತ್ತಿರ ಆಗಿದ್ದರಂತೆ. ಅಂದರೆ ರಾಜಕುಮಾರನಾಗಿಯೂ, ಪ್ರಜೆಗಳ ಕಷ್ಟ ಸುಖದ ವಿಚಾರಣೆ ರಾಮನಿಂದಾಗುತ್ತಿತ್ತು. ಶ್ರೀ ರಾಮರಿಗೆ ಪಟ್ಟಾಭಿಷೇಕವಾವುದು ಎಂದು ತಿಳಿದಾಗ, ಸಂಭ್ರಮಿಸಿದವರೇ ಪ್ರಜೆಗಳು. ಹಾಗಂತ ದಶರಥನಿಗೆ ಗೌರವ ಕೊಡುತ್ತಿರಲಿಲ್ಲ ಎಂಬರ್ಥವಲ್ಲ , ರಘುವಂಶ ಸಂಜಾತ ರಾಮನ ಮೇಲಿದ್ದ ಅತೀವ ಪ್ರೀತಿ. ಹಾಗಾಗಿ ಒಡೆಯ ಎಂಬರ್ಥದಲ್ಲಿ, "ರಘುನಾಥಾ" ಎಂದು ಕರೆಯುತ್ತಿದ್ದರು. ಕೋದಂಡರಾಮರಿಗೆ, ಪ್ರತಿಯೋರ್ವರೂ, ವಿವಿಧ ನಾಮಗಳಿಂದ ಕರೆಯುತ್ತಿದ್ದರು. ನಾವು ಪ್ರಸಿದ್ಧ ಶ್ಲೋಕ ಹೇಳುತ್ತಿರಬಹುದು. ಯಾವುದೆಂದರೆ,

"ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ?
ರಘುನಾಥಾಯ ನಾಥಾಯ ಸೀತಾಯ ಪತಯೇ ನಮಃ ?" ಇದರ ಅರ್ಥ ವಿಶೇಷವಾಗಿದೆ. ಏನೆಂದರೆ,

ಶ್ರೀರಾಮಚಂದ್ರನನ್ನು ದಶರಥರು ಮಾತ್ರ, "ರಾಮಾ" ಎಂದು ಕರೆಯುತ್ತಿದ್ದರು. ಈ ಅಧಿಕಾರ ಇದ್ದುದು ತಂದೆಯಾದರಿಗೆ ಮಾತ್ರ. ತಾಯಿ ಕೌಸಲ್ಯೆಯು ರಾಮನನ್ನು ವಾತ್ಸಲ್ಯಯುತವಾಗಿ, "ರಾಮಭದ್ರ" ಎನ್ನುತ್ತಿದ್ದಳು.

ಮಂಥರೆ & ಕೈಕೇಯಿ "ರಾಮಚಂದ್ರ" ಎನ್ನುತ್ತಿದ್ದರು. ಕಾರಣ, ಬಾಲ್ಯದಲ್ಲಿ ಊಟ ಮಾಡುವಾಗ ಆಕಾಶದ ಚಂದ್ರನನ್ನು ನೋಡಿ, ಚಂದ್ರ ಬೇಕೆಂದು ಹಠ ಮಾಡುತ್ತಿದ್ದ ರಾಮರಿಗೆ, ಕೈಕೇಯಿ–ಮಂಥರೆಯರು ಕನ್ನಡಿಯೊಳಗೆ ಚಂದ್ರನನ್ನು ತೋರಿಸಿ ಸಮಾಧಾನಪಡಿಸಿದ್ದರಿಂದ, "ರಾಮಚಂದ್ರ"ರಾದರು.

ಬ್ರಹ್ಮರ್ಷಿಗಳಾದ ವಶಿಷ್ಠರು, ಜ್ಞಾನಿಯಾಗಿದ್ದ ರಾಮರನ್ನು "ವೇಧಸೇ" ಎಂದು ಕರೆಯುತ್ತಿದ್ದರು. ಪುರಜನರೆಲ್ಲಾ ತಮ್ಮ ಒಡೆಯ, ರಘುವಂಶದ ಅರಸು ಎಂಬರ್ಥದಲ್ಲಿ "ರಘುನಾಥ" ಎಂದು ಕರೆಯುತ್ತಿದ್ದರು.ಇನ್ನು ಸೀತೆ, ಪತಿಗೆ "ನಾಥ" ಎಂದಷ್ಟೆ ಕರೆಯುತ್ತಿದ್ದವಳು. ಪತ್ನಿಗೆ ಮಾತ್ರ ಆ ಹಕ್ಕಲ್ಲವೇ!!ಸೀತೆಯ ತವರು, ಮಿಥಿಲೆಯಲ್ಲಿ, 'ನಮ್ಮ ಮಗಳು ಸೀತೆಯ ಗಂಡ, ಅಳಿಯ"ಎಂದು, "ಸೀತಾಯ ಪತಯೇ" ಎಂಬುದಾಗಿ ಅಭಿಮಾನದಿಂದ ಕರೆಯುತ್ತಿದ್ದರು. ಪುರುಂದರದಾಸರ ವಾಣಿಯಂತೆ, ಪ್ರತಿ ರಾಮನಾಮವು ಪಾಯಸವಾಗಿ ಮುದ ನೀಡುವಂತಹುದೇ.

ತಂದೆಯ ವಚನ ಪಾಲನೆಗೆ, ವನವಾಸಕ್ಕೆ ಹೊರಟಾಗ ಇಡೀ ಅಯೋಧ್ಯೆಯ ಜನರು ರಾಮಚಂದ್ರರ ಜೊತೆ ಹೊರಟಿದ್ದು, ನಂತರ ತಮ್ಮ ರಘನಾಥನ ಅಣತಿಯಂತೆ, ಪುರಕ್ಕೆ ವಾಪಾಸು ಹೋದರೂ, ದಿನಂಪ್ರತಿಯೂ, ತಮ್ಮ ರಾಮರ ಹಿಂತಿರುಗುವಿಕೆಯನ್ನೆ ಕಾಯುತ್ತಾ ಎದುರು ನೋಡುತ್ತಿದ್ದರು. ರಾಮರ ಮೇಲಿನ ಪ್ರೀತಿಯೂ ಅಪಾರವೇ!! ಅಂದು–ಇಂದು ಶ್ರೀರಾಮರ ಮೇಲಿನ ಪ್ರೀತಿ ಭಾರತೀಯರಿಗೆ ಸದಾ ಇದೆ.



ತನ್ನ ರಾಜ್ಯದ ಪ್ರತಿ ಜೀವಿಗೂ ಪ್ರಾಧಾನ್ಯತೆ ನೀಡಿದ್ದ ರಾಮಚಂದ್ರರು, ರಾಮ ಸೇತುವೆ ನಿರ್ಮಿಸುವಾಗ, ಪುಟ್ಟ ಅಳಿಲಿನ ಸೇವೆಯನ್ನು ಪ್ರೀತಿಯಿಂದಲೇ ಸ್ವೀಕರಿಸಿದ್ದರು.

ಇನ್ನು ಶ್ರೀರಾಮರ, ತಾಯ್ನೆಲದ ಪ್ರೀತಿ–ಗೌರವವೂ ಅಪಾರ. ಯುದ್ಧ ಗೆದ್ದ ಮೇಲೆ ಚಿನ್ನದ ಅರಮನೆ ಇದ್ದ, ಲಂಕೆಗೆ ಅಧಿಪತಿಯಾಗೆಂದು, ರಾವಣನ ಕಿರಿ ಸಹೋದರ ವಿಭೂಷಣ ಕೇಳಿಕೊಂಡಾಗ, "ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರಿಯಸೀ"ಎಂದು, ತಾಯ್ನೆಲ ಸ್ವರ್ಗಕ್ಕಿಂತ ಮಿಗಿಲೆಂದು, ನಯವಾಗಿ ನಿರಾಕರಿಸಿ, ವಿಭೂಷಣನಿಗೆ ಲಂಕೆಗೆ ಪಟ್ಟ ಕಟ್ಟಿಯೇ ಹಿಂತಿರುಗಿದವರು ಶ್ರೀರಾಮರು, ಇಂದಿಗೂ ಆದರ್ಶನೀಯರು.

ರಾಮನವಮಿಯಲ್ಲಿ, ಸೇವಾ ಮನೋಭಾವಕ್ಕೆ, ರಾಮಭಕ್ತಿಗೆ ಹೆಸರಾದ ರಾಮಧೂತ, ರಾಮಭಂಟ ಹನುಮಂತನನ್ನು ಮರೆಯುದುಂಟೆ!? ಕೇಳಿರಬಹುದು,

**"ಯತ್ರ ಯತ್ರ ರಘುನಾಥ ಕೀರ್ತನಂ.**
**ತತ್ರ ತತ್ರ ಕೃತಮಸ್ತಕಾಂಜಲಿಮ್**
**ಭಾಷ್ಪವಾರಿಪರಿಪೂರ್ಣಲೋಚನಂ**
**ಮಾರುತಿಂ ನಮತ ರಾಕ್ಷಸಾಂತಕಂ"** ಅಂದರೆ, ಎಲ್ಲೆಲ್ಲಿ ರಾಮಾಯಣ ಕೀರ್ತನೆ ನಡೆಯುವುದೋ, ಅಲ್ಲಿ ಕಂಗಳಲ್ಲಿ ಆನಂದಭಾಷ್ಪ ತುಂಬಿರುವ, ರಾಕ್ಷಸಾಂತಕ ಮಾರುತಿಗೆ ನಮಸ್ಕರಿಸಬೇಕು. ನಿಜವೂ ಹೌದು. ರಾಮಾಯಣ ಕೇಳುವಾಗ ಖಂಡಿತಾ ಕೇಳುಗರಿಗೆ, ಆನಂದ ಭಾಷ್ಪವೇ ಬರುವುದು. ನಾವು ಗಮನಿಸಿರಬಹುದು, ಪ್ರತಿ ರಾಮಾಯಣ ನಡೆವ ಸ್ಥಳಗಳಲ್ಲಿ, ರಾಮನ ಪಕ್ಕ ಒಂದು ಪ್ರತ್ಯೇಕ ಆಸನ, ವ್ಯಾಸಪೀಠ ಇದ್ದೇ ಇರುವುದು. ಅಂದರೆ ರಾಮಾಯಾಣ ನಡೆಯುವಾಗ, ಆಂಜನೆಯ ಒಂದೇ ಬರುವರು ಎಂಬ ಪ್ರಬಲ ನಂಬಿಕೆ ಇಂದ.

ಪ್ರತಿ ಯುಗಕ್ಕೆ ಯುಗ ಪುರುಷರು ಇರುವಂತೆ, ತ್ರೇತಾಯುಗಕ್ಕೆ, ಉನ್ನತ ಆದರ್ಶಗಳ ಸಾಕಾರವಾಗಿದ್ದ, ಶ್ರೀ ರಾಮರೇ ಯುಗ ಪುರುಷರು. ಪಟ್ಟಾಭಿಷೇಕವಾಗುವಾಗಲೂ ಹೆಚ್ಚಾಗಿ ಸಂಭ್ರಮಿಸದೇ, ವನವಾಸಕ್ಕೆ ಹೋಗುವಾಗಲೂ ದುಃಖ ಮಾಡದೇ, ನಿರ್ಲಿಪ್ತವಾಗಿ ಸುಖ–ದುಃಖಗಳೆರಡೂ, ಸಮಾನವೆಂದು ಸಾರಿದ ಶ್ರೀರಾಮರು ಪುರುಪೋತ್ತಮರು. "ಧರ್ಮೋ ಹಿ ಪರಮೋ ಲೋಕೆ" ಎಂದು ಮಾನವೀಯ ಗುಣಗಳನ್ನು ಸಾರಿದ "ಶ್ರೀ ರಾಮಾಯಣ", ಎಂದೆಂದಿಗೂ ಅನುಕರಣೀಯ ಎಂದರೂ ಅತಿಶಯೋಕ್ತಿ ಅಲ್ಲ.

# ಮತದಾನ ನಮ್ಮ ಹಕ್ಕು ತಪ್ಪದೇ ಮತ ಚಲಾಯಿಸಿ

## ಡಾ.ಅಬ್ದುಲ್ಲಾ ಹೇಳಿಕೆ । ಆರೋಗ್ಯ ಇಲಾಖೆಯಿಂದ ವಿವಿಧೆಡೆ ಮತದಾನ ಜಾಗೃತಿ




■ **ಹಂಪಿ ಟೈಮ್ಸ್ ಬಳ್ಳಾರಿ**

ಮೇ 7 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಎಲ್ಲರೂ ತಪ್ಪದೇ ಮತ ಚಲಾಯಿಸಬೇಕು, ಮತದಾನ ನಮ್ಮ ಹಕ್ಕು ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಆಶ್ರಯದಲ್ಲಿ ಮಂಗಳವಾರದಂದು ಬಳ್ಳಾರಿ ನಗರದ ಕರ್ನಾಟಕ ಗೃಹ ಮಂಡಳಿ ಕಾಲೋನಿ, ಸತ್ಯ ನಾರಾಯಣಪೇಟೆ, ಗಾಂಧಿನಗರದ ಮದಕೇರಿ ಭೀಮಪ್ಪ ಹಿರಿಯ ಪ್ರಾಥಮಿಕ ಶಾಲೆ ಆವರಣ, ಡಿಆರ್ ಪೊಲೀಸ್ ಲೈನ್, ರಾಘವೇಂದ್ರ ಮಠ ಸೇರಿದಂತೆ ವಿವಿಧೆಡೆ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಬ್ಬ ಅರ್ಹ ಮತದಾರರು ತಪ್ಪದೇ ಮತ ಚಲಾವಣೆ ಮಾಡಿ, ಇತರರು ಮತ ಚಲಾಯಿಸುವಂತೆ ಪ್ರೇರೇಪಿಸಬೇಕು ಎಂದು ತಿಳಿಸಿದರು.

ಬಳಿಕ ಮತದಾರರ ಪ್ರತಿಜ್ಞಾ ವಿಧಿ ಭೋದಿಸಿದರು. ಇದೇ ವೇಳೆ ನಾನು ಹೆಮ್ಮೆಯ ಮತದಾರ ಎನ್ನುವ ಸೆಲ್ಫಿ ಬೂತ್ ಪಾಯಿಂಟ್‌ನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು, ಅಧಿಕಾರಿಗಳು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಜಾಗೃತಿಜಾಥಾದಲ್ಲಿಆಶಾಕಾರ್ಯಕರ್ತೆಯರು ಮತದಾನ ಕುರಿತ ವಿವಿಧ ಘೋಷಣೆಗಳ ಜಾಗೃತಿ ಫಲಕಗಳನ್ನು ಹಿಡಿದು, ಘೋಷಣೆ ಕೂಗಿದ್ದು, ವಿಶೇಷವಾಗಿತ್ತು.

ಈ ಸಂಧರ್ಭದಲ್ಲಿ ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಕಾಶಿಪ್ರಸಾದ್, ವೈದ್ಯಾಧಿಕಾರಿ ಡಾ.ಸುಧಾರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಮ್ಮ ಉಪ್ಪಾರ, ಬಿಪಿಎಮ್ ಮೇಘರಾಜ್, ಎಲ್‌ಡಿಸಿ ರಾಘವೇಂದ್ರ, ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಶೇಖರ ಗೌಡ್ರು ಸಿದ್ರಾಮಪ್ಪ, ಪಿಹೆಚ್‌ಓ ಜ್ಯೋತಿಲಕ್ಷ್ಮೀ, ಚೇತನಾ, ಪದ್ಮಾವತಿ, ದುರ್ಗಾಭವಾನಿ, ನಾಗಮಣಿ, ಉಮಾ ಸೇರಿದಂತೆ ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮತದಾನದ ಪವಿತ್ರ ಕಾರ್ಯಕ್ಕೆ ಎಲ್ಲರೂ ಪಾಲ್ಗೊಳ್ಳೋಣ



■ **ಹಂಪಿ ಟೈಮ್ಸ್ ಕೊಪ್ಪಳ**

ಮತದಾನ ಎನ್ನುವದು ಪವಿತ್ರ ಕಾರ್ಯ. ಪ್ರಜಾಪ್ರಭುತ್ವದಲ್ಲಿ ಮತ ಚಲಾವಣೆಗೆ ಅವಕಾಶ ಇರುವದು ಸಂವಿಧಾನವು ನಮಗೆ ದೊಡ್ಡ ಕೊಡುಗೆಯಾಗಿದೆಂದು ಗಿಣಿಗೇರಾ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಂಜುಳಾ ದೇವಿ ಹೂಗಾರ ಹೇಳಿದರು.

ಬುಧವಾರದಂದು ಗಿಣಿಗೇರಾ ಗ್ರಾಮ ಪಂಚಾಯತಿಯ ನರೇಗಾ ಕಾಮಗಾರಿ ಸ್ಥಳವಾದ ಗಿಣಿಗೇರಾ ಗ್ರಾಮದ ಕೆರೆ ಕಾಮಗಾರಿಯಲ್ಲಿ ಗ್ರಾಮ ಪಂಚಾಯತಿ ಸ್ವೀಪ್ ಸಮಿತಿ ವತಿಯಿಂದ ಕೂಲಿಕಾರರಿಗೆ ಜರುಗಿದ ಸ್ವೀಪ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮೇ–7ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವುದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಚುನಾವಣೆ ಆಯೋಗ ನಿಗದಿಪಡಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ನರೇಗಾ ಕೂಲಿಕಾರರು ಮತದಾನ ಮಾಡಿ ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಮಂಜುನಾಥ ಭಾವಿಕಟ್ಟಿ, ತಾಂತ್ರಿಕ ಸಹಾಯಕಿ ಅಕ್ಷತಾ ಕುಮಾರಿ, ಬೇರ್ ಫೂಟ್ ಟೆಕ್ನಿಷಿಯನ್ ದಾವಲಸಾಬ ಮುಲ್ಲಾ, ಕರವಸೂಲಿಗಾರ ಈಶ್ವರಯ್ಯ, ಡಿಇಒ ರಾಜಾಭಕ್ಷಿ, ನೀರಗಂಟಿ ಶ್ರೀಕಾಂತ ಪೂಜಾರ, ಕಾಯಕ ಬಂಧುಗಳು, 825 ನರೇಗಾ ಕೂಲಿಕಾರರು ಭಾಗವಹಿಸಿದ್ದರು.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**18–04–2024 – ಗುರುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಗಂಡ |
| ಕರಣ | : ಗರಜ |
| ಸೂರ್ಯೋದಯ | : 06:04:44 |
| ಸೂರ್ಯಾಸ್ತ | : 18:47:54 |
| ರಾಹು | : 14:02–15:37 |
| ಯಮಘಂಡ | : 06:05–07:40 |
| ಗುಳಿಕ | : 09:16–10:51 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 17–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.78 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 24 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.907 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.93 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 251 ಕ್ಯುಸೆಕ್ |
| ಸಾಮರ್ಥ್ಯ | 3.157 ಟಿಎಂಸಿ |

# ಎತ್ತಿನ ಬಂಡಿ ಮೆರವಣಿಗೆ ಆಕರ್ಷಕ ಮತದಾನ ಜಾಗೃತಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಚುನಾವಣೆ ಪರ್ವ ದೇಶದ ಗರ್ವ ಎನ್ನುವ ಚುನಾವಣೆ ಆಯೋಗದ ಸಂದೇಶದೊಂದಿಗೆ ಕಂಪ್ಲಿ ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಅಂಗವಾಗಿ ಮತದಾನದ ಜಾಗೃತಿ ಕುರಿತು ಎಮ್ಮಿಗನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎತ್ತಿನ ಬಂಡಿಗಳ ಮೆರವಣಿಗೆ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮವನ್ನು ಬುಧವಾರ ಹಮ್ಮಿಕೊಳ್ಳಲಾಯಿತು.

ಕಂಪ್ಲಿ ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ತಾಪಂ ಇಓ ಶ್ರೀಕುಮಾರ್ ಅವರು, ಗ್ರಾಮದ ಸರ್ಕಾರಿ ಹಿರಿಯ ಶತಮಾನ ಶಾಲೆ ಆವರಣದಲ್ಲಿ ಎತ್ತಿನ ಬಂಡಿ ಜಾಥಾಗೆ ಹಸಿರು ನಿಸಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮೇ 07 ರಂದು ನಡೆಯುವ ಮತದಾನ ದಿನದಂದು ಎಲ್ಲರೂ ತಪ್ಪದೇ ಮತದಾನ ಮಾಡಿ, ನಿಮ್ಮವರಿಗೂ ಮತದಾನ ಮಾಡುವಂತೆ ತಿಳಿಸಿರಿ ಎಂದು ಅವರು ಕರೆ ನೀಡಿದರು.

ಎತ್ತಿನ ಬಂಡಿಗಳ ಮೆರವಣಿಗೆ ಜಾಥಾವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಮತದಾನದ ಅರಿವು ಮೂಡಿಸಲಾಯಿತು.

ಗಮನಸೆಳೆದ ಅಲಂಕೃತ ಎತ್ತಿನಬಂಡಿಗಳು:

ಮತದಾನ ಜಾಗೃತಿ ಅಂಗವಾಗಿ ಹಮ್ಮಿಕೊಂಡಿದ್ದ ಎತ್ತಿನ ಬಂಡಿಗಳ ಮೆರವಣಿಗೆ ಜಾಥಾದಲ್ಲಿ ಎತ್ತಿನ ಬಂಡಿಗಳಿಗೆ ಅಲಂಕೃತವಾಗಿ ಸಿಂಗರಿಸಲಾಗಿತ್ತು. ತಳೀರು–ತೋರಣ, ಬಲೂನ್‌ಗಳು ಮತ್ತು ಮತದಾನ ಘೋಷಣೆಗಳ ಫಲಕಗಳು ಒಳಗೊಂಡಂತೆ ನೋಡುಗರನ್ನು ಆಕರ್ಷಿಸುವಂತೆ ಗಮನಸೆಳೆದವು.

ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ತಾರು ನಾಯಕ್, ಟಿಐಇಸಿ ಸಂಯೋಜಕ ಹನುಮೇಶ್, ಆರೋಗ್ಯ ಇಲಾಖೆ ಅಧಿಕಾರಿ ಬಸವನಗೌಡ, ಶಾಲಾ ಮುಖ್ಯ ಶಿಕ್ಷಕ ಜಾತಯ್ಯ ಸೇರಿದಂತೆ ಶಾಲೆಯ ಎಲ್ಲಾ ಮುಖ್ಯ ಗುರುಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಗ್ರಾಮ ಪಂಚಾಯಿತಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಜಿಲ್ಲಾ ಸ್ವೀಪ್ ಐಕಾನ್‌ಗಳ ನೇಮಕ



■ **ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಪ್ರಯುಕ್ತ ಜಿಲ್ಲೆಯಲ್ಲಿ ಮತದಾರರನ್ನು ಮತದಾನಕ್ಕಾಗಿ ಪ್ರೇರೇಪಿಸಲು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಬಳ್ಳಾರಿ ಜಿಲ್ಲೆಯ ಜಿಲ್ಲಾ ಸ್ವೀಪ್ ಐಕಾನ್ ಆಗಿ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

**ನೇಮಕಗೊಂಡವರ ವಿವರ:** ನಂದಿನಿ ತಂದೆ ಯಲ್ಲಪ್ಪ (ಅಥ್ಲೇಟಿಕ್), ಎಸ್.ಕೆ.ಆರ್. ಜಿಲಾನ್ ಭಾಷಾ ತಂದೆ ಫಕ್ರುದ್ದೀನ್ (ನೃತ್ಯಗಾರರು), ಕವಿತಾ ತಂದೆ ರಾಮನಗೌಡ (ರಾಷ್ಟ್ರೀಯ ಪ್ಯಾರಾ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್) ಇವರನ್ನು ನೇಮಕ ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲೋಕಸಭಾ ಸಾರ್ವತ್ರಿಕ ಚುನಾವಣೆ: ನಾಲ್ವರು ನಾಮಪತ್ರ ಸಲ್ಲಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ (ಪ.ಪಂ) ಲೋಕಸಭಾ ಸಾರ್ವತ್ರಿಕ ಚುನಾವಣೆ 2024 ರ ಅಂಗವಾಗಿ ನಾಲ್ಕನೇ ದಿನವಾದ ಬುಧವಾರದಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಅರುಣ್ ಹಿರೇಹಾಳ್, ಪಿಜೆಪಿ (ಪ್ರಹಾರ ಜನಶಕ್ತಿ ಪಕ್ಷ) ಪಕ್ಷದಿಂದ ಮಂಜುನಾಥ್ ಗೋಸಲ್, ಬಿಎಸ್‌ಪಿ (ಬಹುಜನ ಸಮಾಜ ಪಕ್ಷ) ಕೊಳಗಲ್ ಕೃಷ್ಣಪ್ಪ ಮತ್ತು ಪಕ್ಷೇತರ ಅಭ್ಯರ್ಥಿಯಾಗಿ ವೈ.ಪಂಪಾಪತಿ ಸೇರಿ ಒಟ್ಟು ನಾಲ್ವರು ಬುಧವಾರ ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ನಾಮಪತ್ರ ಸಲ್ಲಿಸಿದ್ದಾರೆ. ಚುನಾವಣೆಗೆ ಅಧಿಸೂಚನೆ ಪ್ರಕಟಗೊಂಡ ಏ.12 ರಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಏ.15 ಸೋಮವಾರದಂದು ಓರ್ವ ಅಭ್ಯರ್ಥಿಯು ನಾಮಪತ್ರ ಸಲ್ಲಿಕೆ ಮಾಡಿದ್ದರು. ಏ.16 ರಂದು ಯಾವುದೇ ನಾಮಪತ್ರ ಸಲ್ಲಿಕೆಯಾಗಿರುವುದಿಲ್ಲ. ಏ.17 ರಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಇದುವರೆಗೆ ಒಟ್ಟು 09 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದಂತಾಗಿದೆ. ನಾಮಪತ್ರ ಸಲ್ಲಿಸಲು ಏಪ್ರಿಲ್ 19 ಕೊನೆ ದಿನವಾಗಿದ್ದು, ಏಪ್ರಿಲ್ 20 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏಪ್ರಿಲ್ 22 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

## ಮತದಾನವು ಸಂವಿಧಾನದ ಹಕ್ಕು

**ಹಂಪಿ ಟೈಮ್ಸ್ ಬಳ್ಳಾರಿ**

ಮತದಾನ ಮಾಡುವುದು ನಮ್ಮ ಸಂವಿಧಾನವು ನೀಡಿರುವ ಹಕ್ಕು. ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ಕೆನರಾ ಬ್ಯಾಂಕ್ ಎಲ್‌ಡಿಎಂ ಸೋಮನಗೌಡ ಐನಾಪುರ ಅವರು ಹೇಳಿದರು.

ಮಂಗಳವಾರದಂದು ಲೀಡ್ ಬ್ಯಾಂಕ್ ಕಚೇರಿ, ಕೆನರಾ ಬ್ಯಾಂಕ್, ಎಎಫ್‌ಎಲ್ ಮತ್ತು ಸಂಜೀವರಾಯನ ಕೋಟೆ ಗ್ರಾಮ ಪಂಚಾಯತ್ ಇವರ ಸಹಯೋಗದಲ್ಲಿ ಸ್ವೀಪ್ ಚಟುವಟಿಕೆ ಅಂಗವಾಗಿ ಸಂಜೀವರಾಯನ ಕೋಟೆ ಗ್ರಾಮದಲ್ಲಿ ನರೇಗಾ ಕಾಮಗಾರಿ ಸ್ಥಳದಲ್ಲಿ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಶಿಬಿರದಲ್ಲಿ ಅವರು ಮಾತನಾಡಿದರು.

ಗ್ರಾಪಂ ಪಿಡಿಓ ಸುಮಾಲತಾ ಅವರು ಮಾತನಾಡಿ, ಎಲ್ಲರೂ ಕಡ್ಡಾಯವಾಗಿ ಮತದಾನದ ಅಗತ್ಯ ತಿಳಿಯಬೇಕು ಮತ್ತು ಎಲ್ಲಾ ಅರ್ಹ ಮತದಾರರು ಮತದಾನ ಮಾಡುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಕಾರ್ಯದರ್ಶಿ ಸುದರ್ಶನ್ ರೆಡ್ಡಿ, ಸಿಬಿಆರ್‌ಎಸ್‌ಇಟಿ ನಿರ್ದೇಶಕ ರಾಜೇಸಾಬ್, ಎಫ್‌ಎಲ್‌ಸಿ ದಿನೇಶ್ ಕುಮಾರ್, ಎಲ್‌ಡಿಎಂ ಕಚೇರಿ ಸಿಬ್ಬಂದಿ ರಮೇಶ್, ಬಿ.ಸಿ.ಜಡೇಶ್ ಸೇರಿದಂತೆ 400 ಕ್ಕೂ ಹೆಚ್ಚು ನರೇಗಾ ಕಾರ್ಮಿಕರು ಉಪಸ್ಥಿತರಿದ್ದರು.

# 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿಗೆ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ರೂ.ಗಳ ಒಳಗಿರಬೇಕು. ಅರ್ಜಿಗಳನ್ನು ಮೇ 9 ರಿಂದ ಮೇ 21ರವರೆಗೆ ಸಂಬಂಧಿಸಿದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ಮತ್ತು ಸಹಾಯಕ ನಿರ್ದೇಶಕರ ಕಾರ್ಯಾಲಯ ಸಮಾಜ ಕಲ್ಯಾಣ ಇಲಾಖೆ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಜಿಲ್ಲಾ ಮತ್ತು ತಾಲೂಕು ಕಚೇರಿಗಳಲ್ಲಿ ಪಡೆಯಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮೇ 21 ಆಗಿದೆ. ಡಯಟ್ ಮೂಲಕ ಪ್ರವೇಶ ಪರೀಕ್ಷೆಯನ್ನು ಮೇ 28ರಂದು ನಡೆಸಲಾಗುವುದು. ಮೇ 31ರಂದು ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಕಚೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ತಾಲೂಕುವಾರು ಸಂಪರ್ಕ ಸಂಖ್ಯೆ ನೀಡಲಾಗಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕೂಡ್ಲಿಗಿ ತಾಲೂಕು ಕಚೇರಿ ಮೊ–7022223200., ಹರಪನಹಳ್ಳಿ ತಾಲೂಕು ಕಚೇರಿ ಮೊ–9483640733., ಹಡಗಲಿಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಮೊ:9901980762, ಹಗರಿಬೊಮ್ಮನ ಹಳ್ಳಿಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಮೊ:9972078762 ಇವರಿಗೆ ಸಂಪರ್ಕಿಸಿ

# ಏ.18 ರಂದು ಬಳ್ಳಾರಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ ಶ್ರೀರಾಂಪುರ ಕಾಲೋನಿಯ ವಿದ್ಯುತ್ ಪರಿವರ್ತಕ ಸ್ಥಳಾಂತರಿಸುವ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಏ.18 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ 11 ಕೆವಿ ಫೀಡರ್‌ನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ಅವರು ತಿಳಿಸಿದ್ದಾರೆ.

ಎಫ್–64 ಫೀಡರ್ ವ್ಯಾಪ್ತಿಯ ರೂಪನಗುಡಿ ರಸ್ತೆ, ಎಸ್‌ಆರ್‌ಪಿ ಕಾಲೋನಿ, ಅಂಜಿನಪ್ಪ ನಗರ, ಮಾರ್ಕಂಡೇಯ ನಗರ, ಉಮಾಶಂಕರ ಕಾಲೋನಿ, ಗೋನಾಳ್, ಸಂಸ್ಕೃತಿ ಶಾಲೆ, ಎಸ್‌ಆರ್‌ಎಂ ಲೇಔಟ್, ವೆಂಕಟಲಕ್ಷ್ಮಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಾರ್ವಜನಿಕರು ಸಹಕರಿಸಬೇಕು ಎಂದು ತಿಳಿಸಿದ್ದಾರೆ.




# ಮದ್ಯ ವಶ: 06 ಪ್ರಕರಣ ದಾಖಲು



■ **ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಚುನಾವಣೆಗೆ ನೀತಿ ಸಂಹಿತೆ ಜಾರಿಯಿರುವುದರಿಂದ ಜಿಲ್ಲೆಯಲ್ಲಿ ಅಕ್ರಮ ಮದ್ಯ ಹೊಂದುವಿಕೆ ಮತ್ತು ಸಾಗಾಣಿಕೆ ಸಂಬಂಧಿಸಿದಂತೆ ಜಪ್ತಿ ಮಾಡಿ ಮಂಗಳವಾರ 06 ಪ್ರಕರಣ ದಾಖಲಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತ ಮಂಜುನಾಥ ಅವರು ತಿಳಿಸಿದ್ದಾರೆ.

ಸಿರುಗುಪ್ಪ ತಾಲ್ಲೂಕಿನ ಬೀರಳ್ಳಿ ಗ್ರಾಮದಿಂದ ರಾವಿಹಾಳ್ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿನ ಕೆರೆ ದಂಡೆಯ ಹತ್ತಿರ ರಸ್ತೆಗಾವಲು ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ 51.840 ಲೀ. (ಅಂದಾಜು ಮೌಲ್ಯ ರೂ.48,045) ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸವಾರನ್ನು ವಶಕ್ಕೆ ಪಡೆದುಕೊಂಡು ಮದ್ಯ ಹಾಗೂ ವಾಹನವನ್ನು ಜಪ್ತುಪಡಿಸಿ, ಪ್ರಕರಣ ದಾಖಲಿಸಿಲಾಗಿದೆ.

ಕುರುಗೋಡು ಪಟ್ಟಣದಿಂದ ಬಾದನಹಟ್ಟಿ ಗ್ರಾಮದ ಕಡೆ ಹೋಗುವ ರಸ್ತೆಯಲ್ಲಿ ರಸ್ತೆಗಾವಲು ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ 7.380 ಲೀ. (ಅಂದಾಜು ಮೌಲ್ಯ ರೂ.64516) ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದನ್ನು ವಶಕ್ಕೆ ಪಡೆದುಕೊಂಡು ಮದ್ಯ ಹಾಗೂ ವಾಹನವನ್ನು ಜಪ್ತುಪಡಿಸಿ, ವಾಹನ ಸವಾರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಪಟ್ಟಣದಿಂದ ದೇವಿನಗರ ಕ್ಯಾಂಪ್‌ಗೆ ಹೋಗುವ ಮಾರ್ಗ ಮದ್ಯದಲ್ಲಿ ಬರುವ ಕೆ.ಇ.ಬಿ ಹತ್ತಿರ ರಸ್ತೆಗಾವಲು ವೇಳೆ ದ್ವಿಚಕ್ರ ವಾಹನದಲ್ಲಿ 17.100 ಲೀ. (ಅಂದಾಜು ಮೌಲ್ಯ ರೂ.78,589) ಮದ್ಯ ಹಾಗೂ ವಾಹನವನ್ನು ಜಪ್ತುಪಡಿಸಿದ್ದು, ಪ್ರಕರಣ ದಾಖಲಿಸಲಾಗಿದೆ.

ಬಳ್ಳಾರಿ ನಗರದ ಗುಗ್ಗರಹಟ್ಟಿಯಿಂದ ಹೊನ್ನಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ತ್ರಿಚಕ್ರ ವಾಹನದಲ್ಲಿ 12.960 ಲೀ. (ಅಂದಾಜು ಮೌಲ್ಯ ರೂ.85,760) ಮದ್ಯ ಹಾಗೂ ವಾಹನ ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಲಾಗಿದೆ.

ಬಳ್ಳಾರಿ ತಾಲ್ಲೂಕಿನ ಜಾನೇಕುಂಟೆ ತಾಂಡಾದಲ್ಲಿನ ಕಿರಾಣಿ ಅಂಗಡಿಯ ಮೇಲೆ ದಾಳಿ ಮಾಡಿದಾಗ ಅಕ್ರಮವಾಗಿ 9.000 ಲೀ. ಮದ್ಯ ಮತ್ತು 6.500 ಲೀ. ಬಿಯರ್ (ಅಂದಾಜು ಮೌಲ್ಯ ರೂ.7,360) ಹೊಂದಿದ್ದಕ್ಕಾಗಿ ವಶಕ್ಕೆ ಪಡೆದುಕೊಂಡು ಮದ್ಯ ಮತ್ತು ಬಿಯರ್ ಜಪ್ತು ಮಾಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**IN THE COURT OF THE ADDL. CIVIL JUDGE AND JMFC AT HOSAPETE**
**Cri M.C.No.21/2024**

Between: Murthy ...Petitioner
Versus
Commissioner cum Registrar birth and death CMC Hosapete ...Respondent

**To, Whom so ever it may concern**

WHEREAS the above name Murthy son of Kandaswamy aged about 36 years Hindu residing at 14th ward Dress camp T.B. Dam Hosapete Hosapete taluk filed the above petition under section 13(3) of birth and death registration Act for obtaining death certificate his father Kandaswamy son of Muthysettaru who expired on 26.12.2020 at 14th ward Dress camp T.B.Dam Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 29/4/2024 at 11.00 'O' clock in the noon, to answer the petition as on the day fixed, otherwise the petition will be disposed in your absence

Given under my hand and the seal of the Court, this 08 day of April 2024

By Order of the court
Chief Ministerial Officer
Addl Civil Judge and JMFC at Hosapete

L.S. Ananda
Advocate, Hosapete




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA